ಕರ್ನಾಟಕ ಗಾಂಧೀ ಸ್ಮಾರಕ ನಿಧಿ


ಬಾಪು ಪ್ರಪಂಚ

BAPU PRAPANCHA

ಕನ್ನಡ - English Monthly

ಸಂಪುಟ – 2 : ಸಂಚಿಕೆ – 2 ಫೆಬ್ರವರಿ 2020 ಮಾಸಿಕ ₹ 20/–





ಪಶ್ಚಿಮವಾಹಿನಿಯಲ್ಲಿ ಚಿತಾಭಸ್ಮ ವಿಸರ್ಜನೆ

1948 ಫೆ. 12ರಂದು ಗಾಂಧೀಜಿ ಚಿತಾಭಸ್ಮವನ್ನು ಕರ್ನಾಟಕ
ತರಲಾಯಿತು. ಆ ಚಿತಾಭಸ್ಮವನ್ನು ಅಂದಿನ ಸಿ.ಎಂ. ಕೆ.ಸಿ. ರೆಡ್ಡಿ ಅವ
ಶ್ರೀರಂಗಪಟ್ಟಣಕ್ಕೆ ತಂದರು. ನಂತರ ಪಶ್ಚಿಮವಾಹಿನಿ ಮಹಾರಾಜ ಛತ್ರ
ಬಳಿ ಹಿಂದು ವಿಧಿವಿಧಾನಗಳ ಮೂಲಕ ಪೂಜೆಗಳನ್ನು ಪೂರೈ
ನಂತರ ಚಿತಾಭಸ್ಮವನ್ನು ವಿಸರ್ಜಿಸಿದರು.

ಮಹಾತ್ಮಾ ಗಾಂಧಿ ಅವರ ಅಹಿಂಸಾತ್ಮಕ ಸತ್ಯಾಗ್ರಹದ ಮಾರ್ಗಗಳನ್ನು ಮಾನ್ಯ ಲೋಕಸಭಾ ಸದಸ್ಯರಾದ ಅನಂತಕುಮಾರ್ ಹೆಗ್ಡೆ ಅವರು ಕ್ಷುಲ್ಲಕ ಹೇಳಿಕೆಗಳ ಮೂಲಕ ಅವಮಾನಿಸಿದ ವಿರುದ್ಧ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರು ನೀಡಿದ ಪ್ರತಿಕಾ ಹೇಳಿಕೆ

Dr. Wooday P. Krishna, B.E., M.S.(Engg.), Ph.D., LLB., M.L.
Consulting Engineer & Arbitrator
Former Member : Karnataka State Disaster Management Authority
Past Chairman : The Institution of Engineers (India), Karnataka State Centre
Hon. General Secretary : Seshadripuram Group of Educational Institutions
Recipient : President's Gold Medal for exceptional Red Cross
Humanitarian Work of high order from the President of India
State Rajyotsava Award for Social Service from Govt. of Karnataka

PRESS STATEMENT

Statement of Anguish, Sadness and Dismay with regard to Lok Sabha Member Shri Anantkumar Hegde's utterance demeaning Gandhi and the Freedom Movement dated 5th February 2020. Lok Sabha Member Shri Anantkumar Hegde is known for his statements in the past that are hateful and generally known for not keeping a sense of decorum in his use of language and repeatedly lowering the standards of civility in public political discourse. It is equally sad that up to now there has been a kind of silent endorsement of his hate speeches and unparliamentary language.

In general, citizens concerned about and committed to preserving peace and harmony in society for the present and future generations, educators and others have been watching helplessly the deterioration in public discourse and the impunity with which people like Sri Hegde have continued this kind of public discourse. His most recent remarks on Gandhi and the Indian Freedom Movement have hit a new low and caused deep dismay, anguish and hurt among large segments of right-thinking people in Karnataka and in India.

As President of the Karnataka Gandhi Smaraka Nidhi, I have been approached by teachers, senior citizens and others from different walks of life, to express their shock, sadness, dismay and anger at such demeaning of our own national history and of the Father of our Nation by those elected to the Parliament of India which is the Supreme Legislative Body of the Nation. Many have expressed their shock and anguish that the law makers should speak with such carelessness using insulting and frivolous words and decrying our own Freedom Movement and its leaders and above all the Mahatma. They have requested me to issue a statement on their behalf and on behalf of the Karnataka Gandhi Smaraka Nidhi not only in the interest of providing moral support and morale to these deeply disappointed citizens but also to share with the public our deep sense of anguish. Anger is beyond us now!

We, at the Karnataka Gandhi Smaraka Nidhi, are deeply disturbed by such irresponsible talk and these kind of hurtful words decrying the very history and legacy of this country, demeaning the great sacrifice of our leaders of the Freedom struggle. It is beyond our anger and condemnation, which we feel must be expressed by those in the leadership of the Government both in the State and at the Centre.

Sri Heggde, as has been his practice in the past, had denied making any such statements though You Tube videos and TV grabs available online net channels clearly show him using the word "Mahatma" in a deprecating and insulting manner. He even says that he stands by his statements!!!

As educators and community leaders we teach our young people compassion, regard for others, tolerance and above all respect for the ideals of our freedom struggle, our leaders such as the Mahatma and others who upheld all the values that we hold as our own today. Sri Anantkumar Hegde's statements and his being unapologetic about it, puts at risk the peace in our society, a society that stands by and upholds values and ethics. This in turn deeply affects our younger generation who are our future citizens.

The only way in which people will have faith in the Rule of Law, the trust in our elected representatives is, if those in authority in his party and the government give him a public reprimand, ask him to apologise to society at large and thus soothe the anguish, sadness and hurt of large sections of society today and give hope in the future to our young people. This is the minimum a decent society and its leadership can do and should do to its citizens, that is to publicly state that our society and leadership does not put up with such uncivility, total lack of respect to our national legacy, heritage and our leaders.

Dr. Wooday P. Krishna
President, KGSN

05.02.2002



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ - ಇಂಗ್ಲಿಷ್ ಮಾಸಪತ್ರಿಕೆ

ಬಾ-ಬಾಪು 150 ವಿಶೇಷ ಸಂಚಿಕೆ

BAPU PRAPANCHA

(A Monthly Kannada - English Magazine of Gandhian Thoughts) occasion of 150th Anniversary of Mahatma Gandhi & Kasturba

ಪ್ರಧಾನ ಸಂಪಾದಕರು : ಡಾ.ವೂಡೇ ಪಿ. ಕೃಷ್ಣ

Chief Editor : **Dr. Wooday P. Krishna**

ಸಂಪಾದಕರು : ಇಂದಿರಾ ಕೃಷ್ಣಪ್ಪ

Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ

Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-560001

Published by :
Karnataka Gandhi Smaraka Nidhi
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

ನೆರವು : ಬಿ.ಎನ್. ಹೇಮಾದೇವಿ

Assistance - **B.N. Hemadevi**

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com

ಈ ಸಂಚಿಕೆಯಲ್ಲಿ



Magna Carta at $ 21.3 mn

One of only 17 existing copies of the 'Magna Carta', the iconic 800 year old English royal manuscript setting out the rights of, sold at auction at Sotheby's for USD 21.3 million, reports AFP from New York The manuscript was picked up by a telephone bidder

Deccan Herald : 20.12.2007

ಸಂಪಾದಕೀಯ

ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ವಂದನೆಗಳು. ಫೆಬ್ರವರಿ ಮಾಹೆಯ ಸಂಚಿಕೆಯನ್ನು ಹೊರತರುತ್ತಿರುವ ಸಂದರ್ಭದಲ್ಲಿ ಮಾತೆ ಕಸ್ತೂರಬಾ ಗಾಂಧಿ ಮತ್ತು ಭಾರತದ ಗಾನ ಕೋಗಿಲೆ ಸರೋಜಿನಿ ನಾಯ್ಡು, ಸಾವಿತ್ರಿ ಪುಲೆ ಅವರನ್ನು ಸ್ಮರಿಸುತ್ತಾ ಸಾಗೋಣ.

ಭಾರತದ ಮಹಿಳೆಯರ ಸಮಾನತೆ ಬಗ್ಗೆ ಸದಾ ಎಚ್ಚರಿಕೆಯ ನಡಿಗೆ ಹಾಕಿದ, ಸಬರಮತಿ ಆಶ್ರಮದಲ್ಲಿ, ಸೇವಾ ಗ್ರಾಮದಲ್ಲಿ ಸಾಮೂಹಿಕ ಸಹಬಾಳ್ವೆಯನ್ನು ಕಲಿಸಿದ ಮಾತೆ ಕಸ್ತೂರಬಾ ಫೆಬ್ರವರಿ 22ರಂದು ನಮ್ಮನಗಲಿದ್ದಾರೆ ಅವರು ಸಹಜೀವನದ ಜ್ಯೋತಿಯಾಗಿದ್ದಾರೆ. ಭಾರತದ ತರಬೇತಿ ಪಡೆದ ಮೊದಲ ಅಧ್ಯಾಪಕಿಯಾಗಿರುವ ಸಾವಿತ್ರಿ ಬಾಯಿಪುಲೆ ನಮ್ಮೆಲ್ಲರ ಶಿಕ್ಷಣಕ್ಕೆ ಪ್ರಥಮ ವೇದಿಕೆ ನಿರ್ಮಾತೃರಾಗಿದ್ದಾರೆ. ಅಂತೆಯೇ ಭಾರತೀಯರ ಮತದಾನದ ಹಕ್ಕಿನ ಪ್ರಸ್ತಾಪದ ಸಂದರ್ಭದಲ್ಲಿ ಮಹಿಳೆಯರ ಮತದಾನದ ಹಕ್ಕನ್ನೂ ಒಗ್ಗೂಡಿಸಿ, ಪ್ರಸ್ತಾವನೆ ಮಂಡಿಸಿ, ಎಲ್ಲಾ ದೇಶಗಳಿಗೆ ಮಾದರಿಯಾದ ತಾರತಮ್ಯ ರಹಿತವಾದ 'ಮತದಾನದ ಹಕ್ಕನ್ನು' ಬ್ರಿಟಿಷ್ ಸರ್ಕಾರದ ಮುಂದೆ ಮಂಡಿಸಿ ಎಲ್ಲರಿಗೂ ಸಮಾನ ಮತದಾನ ಹಕ್ಕಿಗೆ ಕಾರಣಕರ್ತರಾದ ಸರೋಜಿನಿ ನಾಯ್ಡು ಅವರು ಭಾರತೀಯರೆಲ್ಲರ ಮನದಲ್ಲಿ ಚಿರಸ್ಮರಣೀಯರು. ಮಹಾತ್ಮಾಜಿ ಅವರು ಗೋಪಾಲಕೃಷ್ಣ ಗೋಖಲೆ ಅವರನ್ನು ರಾಜಕೀಯ ಗುರುವಾಗಿ ಅಂಗೀಕರಿಸಿದ್ದರು. ಅವರು ಗಾಂಧೀಜಿ ಅವರಿಗೆ ಮೊತ್ತಮೊದಲು ನೀಡಿದ ನುಡಿಯೆಂದರೆ, "ಭಾರತದಲ್ಲಿ ಸಂಚರಿಸು, ದೇಶ, ಜನ ಅವರ ನೋವು, ಸಂಕಟ, ದುಃಖ ದುಃಮ್ಮಾನಗಳನ್ನು ತಿಳಿ". ಈ ವಾಕ್ಯ ಮೋಹನದಾಸರನ್ನು ಮಹಾತ್ಮಗಾಂಧಿ ಆಗುವೆಡೆಗೆ ಕೊಂಡೊಯ್ಯುವ ಪ್ರಥಮ ಮೆಟ್ಟಿಲು ಆಯಿತು ಎನ್ನಬಹುದು. ಹಾಗೆಯೇ ಫೆಬ್ರವರಿ 18ರಂದು ಜನಿಸಿದ ಸಂತ – ರಾಮಕೃಷ್ಣ ಪರಮಹಂಸರು ಹಿಂದೂ ಧರ್ಮದ ಸುಧಾರಣೆಗೆ ಅಪಾರವಾಗಿ ಶ್ರಮಿಸಿದವರು. ಇವರ ಶಿಷ್ಯ ಪರಂಪರೆಯಲ್ಲಿ ಬೆಳೆದ ಸಾಮಾನ್ಯ ಜೀವಿ ನರೇಂದ್ರ ಸ್ವಾಮಿವಿವೇಕಾನಂದರಾಗಲು, ಭಾರತವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಪೂರ್ವವಾಗಿ ಪ್ರತಿನಿಧಿಸಲು ವಿಶ್ವಮಾನವೀಯತೆ ದೀಕ್ಷೆಯನ್ನು ಕೊಟ್ಟವರು. ಸಂತ ರಾಮಕೃಷ್ಣ ಅವರಾಗಿದ್ದಾರೆ. ಇಂಥಹವರೆಲ್ಲರ ಆಶಯಗಳು, ಆದರ್ಶಗಳು ನಮ್ಮೊಳಗೆ ಆವಿರ್ಭವಿಸಲಿ ಎಂದು ಆಶಿಸೋಣ.

ಸಂತರು, ಸಮಾಜ ಸುಧಾರಕರು, ಮಾನವೀಯತೆಯ ಹರಿಕಾರರು, ನಿರಂತರವಾಗಿ, ಜನರ ಮನಸ್ಸುಗಳನ್ನು ಬೆಸೆಯುತ್ತಿದ್ದರೂ ಕೆಲವು ಸಮುದಾಯಗಳನ್ನುನೋಡುವ ದೃಷ್ಟಿಕೋನವಿನ್ನೂ ಬದಲಾಗದಿರುವುದು ಆತಂಕವುಂಟುಮಾಡುತ್ತಿದೆ. ಬೆಂಗಳೂರಿನಲ್ಲಿ ಹಲವು ಪ್ರತಿಷ್ಠಿತ ಸಂಸ್ಥೆಗಳು ಶೌಚಗುಂಡಿಗಳನ್ನು ಸ್ವಚ್ಛಗೊಳಿಸಲು ದಲಿತ ಸಮುದಾಯದವರನ್ನೇ ಇಳಿಸಿ ಅವರ ಸಾವಿಗೆ ಕಾರಣವಾದ ಘಟನೆ ಹೃದಯವಿದ್ರಾವಕವಾಗಿದೆ. ಮಲಹೊರುವ ಪದ್ಧತಿ ನಿಷೇಧ ಕಾಯ್ದೆ ಮತ್ತು ಅದರಲ್ಲಿ ತೊಡಗಿದ್ದವರ ಪುರ್ನವಸತಿ ಕಾಯ್ದೆ 2013 ಹಾಗೂ ಸುಪ್ರಿಂಕೋರ್ಟ್‌ನ ನಿರ್ದೇಶನಗಳನ್ನು ಉಲ್ಲಂಘಿಸಿ, ಹದಿಹರಯದ ಸಿದ್ದಪ್ಪನನ್ನು ಶೌಚಗುಂಡಿಯಲ್ಲಿ ಇಳಿಸಿದ ಇನ್‌ಫೆಂಟ್ರಿ ರಸ್ತೆಯ ಎಸ್.ಎಸ್.ಬಿ.ಎಸ್. ಜೈನ್ ಟ್ರಸ್ಟ್ ಅವರ ವಿರುದ್ಧ ಕಾನೂನು ಕ್ರಮ ತಕ್ಷಣದಲ್ಲಿ ಆಗಬೇಕಿದೆ. ಕರ್ನಾಟಕದಲ್ಲಿ 85ಕ್ಕೂ ಮಿಕ್ಕಿ ಇಂತಹ ಕ್ರೂರ ಘಟನೆಗಳು ನಡೆದಿವೆ. ಬೆಂಗಳೂರು ನಗರದಲ್ಲಿಯೇ 36 ಪ್ರಕರಣಗಳು ಘಟಿಸಿವೆ. ಬಯಲು ಶೌಚ ಮುಕ್ತ ರಾಷ್ಟ್ರವಾಗಬೇಕೆಂಬ ಆಶಯಗಳು ನಿರ್ಮಲ ಗ್ರಾಮ ಯೋಜನೆಗಳು ಹುಸಿಯಾಗಿವೆ. ಆದರೆ ಶೌಚಾಲಯ ನಿರ್ಮಾಣ ಯೋಜನೆ ಮತ್ತು ವೆಚ್ಚಗಳು ಮಾತ್ರ ನೂರ್ಮಡಿಯಾಗಿವೆ. ಜನಪ್ರತಿನಿಧಿಗಳು ಮತ್ತು ಅಧಿಕಾರಿಶಾಹಿಗಳು, ಗೋವಾದಂಥ ಪುಟ್ಟ ರಾಜ್ಯದ ಪರಿಸರ ಸ್ನೇಹಿ ಶೌಚಾಲಯಗಳು ಮತ್ತು ಮೇಘಾಲಯದ ಮಾಪ್ಲಿಯಾಂಗ್ ಎಂಬ ಪುಟ್ಟಗ್ರಾಮ 'ವಿಶ್ವದ ಸ್ವಚ್ಛತೆಯ ಗ್ರಾಮ' ಎಂಬ ಕೀರ್ತಿ ಪಡೆದದ್ದು ಹೇಗೆ ಎಂಬುದನ್ನು ಅಧ್ಯಯನ ನಡೆಸಿ ಎಲ್ಲಾ ರಾಜ್ಯಗಳು ಗಾಂಧೀಜಿ ಅವರ ಸ್ವಚ್ಛ ಭಾರತದ ಧ್ಯೇಯವನ್ನು ಸಾಕಾರಗೊಳಿಸಲು ಸನ್ನದ್ಧರಾಗಲಿ ಎಂದು ಆಶಿಸುತ್ತೇನೆ. ಮಹಾತ್ಮಾಜಿ ಅವರು 1901ರಲ್ಲಿ ಸ್ವಚ್ಛತೆಯ ಪಾಠ/ಕೆಲಸ ಆರಂಭಿಸಿ ಇಂದಿಗೆ 120 ವರ್ಷಗಳಾಗಿವೆ. 'ನಿಮ್ಮ ನಿಮ್ಮ ಹೊಲಸು ನೀವೇ ಸ್ವಚ್ಛ ಮಾಡಿರಿ, ಇದು ಅಸ್ಪೃಶ್ಯರ ಕೆಲಸವಲ್ಲ. ನನ್ನ ಶೌಚಾಲಯ, ಬಚ್ಚಲು, ಸ್ನಾನಗೃಹದ ಸ್ವಚ್ಛತೆ ನನ್ನ ಕೆಲಸ, ನಾನೇ ಭಂಗಿ, ನಾನೇ ಕಸಗುಡಿಸುವವ ಸ್ವಚ್ಛತೆಯೇ ಧರ್ಮ". ಎಂದು ಸ್ವತಹ ಪೊರಕೆ ಹಿಡಿದು ಜನರ ಮನದೊಳಗಿನ ಮತ್ತು ಹೊರಗಿನ ಸ್ವಚ್ಛತೆಯ ಹರಿಕಾರರಾಗಿದ್ದಾರೆಂಬುದನ್ನು ತಿಳಿಸುತ್ತಾ ಎಲ್ಲರೂ "ಪೊರಕೆ ಹಿಡಿಯಿರಿ" ಎನ್ನೋಣ. ಇಲ್ಲೊಂದು ಅಂಥಹದೇ ಅಪಮಾನಕಾರಿಯಾದ ಇನ್ನೊಂದು ಘಟನೆ ನಡೆದಿದೆ. ನಮ್ಮ ಹೆಣ್ಣುಮಕ್ಕಳನ್ನು ಅತ್ಯಂತ ಕೀಳಾಗಿ ಕಾಣುವ, ಪವಿತ್ರತೆಯ ಹೆಸರಲ್ಲಿ ಬಲವಂತದಿಂದ ಒಳಉಡುಪಿನ ಪರಿಶೀಲನೆ ನಡೆಸಿದ ಕೃತ್ಯ ನಡೆದಿರುವುದು ಇಡೀ ಸಮಾಜ ತಲೆತಗ್ಗಿಸುವಂತೆ ಮಾಡಿದೆ. ಗುಜರಾತ್‌ನ ಕ್ರಾಂತಿಗುರು ಶ್ಯಾಮ್ಜಿ ಕೃಷ್ಣವರ್ಮ, ಕಛ್ ವಿ.ವಿ.ಯ ವ್ಯಾಪ್ತಿಗೊಳಪಟ್ಟ, ಶ್ರೀ ಸಹಜಾನಂದ ಗರ್ಲ್ಸ್ ಇನ್ಸಿಟಿಟ್ಯೂಟ್‌ನಲ್ಲಿ ನಡೆದಿದೆ. ಭುಜ್‌ನಲ್ಲಿರುವ ಈ ಕಾಲೇಜು ಮತ್ತು ಹಾಸ್ಟೆಲ್‌ನಲ್ಲಿರುವ ಹೆಣ್ಣುಮಕ್ಕಳನ್ನು ವಾಷ್‌ರೂಂಗೆ ಕರೆದೊಯ್ದು ಅವರು ಮುಟ್ಟಾಗಿದ್ದಾರೆಯೇ? ಇಲ್ಲವೇ? ಎಂಬುದನ್ನು ಅವರ ಒಳ ಉಡುಪನ್ನು ಬಲವಂತದಿಂದ ಬಿಚ್ಚಿಸಿ ನೋಡುತ್ತಿದ್ದಾರೆ. ನಾರಾಯಣ ಮಂದಿರದ ಅನುಯಾಯಿಗಳು ಈ ಕೃತ್ಯ ಮಾಸಿಕ ಜೈವಿಕ ಕ್ರಿಯೆಗೆ ಒಳಗಾಗುವ ವಿದ್ಯಾರ್ಥಿನಿ ಆ ರೀತಿ ಘೋಷಿಸಿಕೊಂಡು, ಪ್ರತ್ಯೇಕವಾಸ, ಹಾಸ್ಟೆಲ್, ಅಡುಗೆ ಮನೆ ಮತ್ತು ಮಂದಿರ ಪ್ರವೇಶ ನಿಷೇಧಕ್ಕೆ, ಸರತಿ ಸಾಲಿನಲ್ಲಿ ಪ್ರತ್ಯೇಕ ನಿಲ್ಲುವಿಕೆಗೆ ಒಳಪಡುತ್ತಿರುವುದು ಆ ರಾಜ್ಯದ ಯಾವ ನಾಯಕರ ಕಣ್ಣಿಗೆ ಬಿದ್ದಿಲ್ಲವೇ? ಈ ಬಗ್ಗೆ ದೂರು ದಾಖಲಿಸದಂತೆ ಬೆದರಿಕೆ ಮತ್ತು ಮಾಸಿಕ ಋತುಚಕ್ರಕ್ಕೆ ಒಳಪಟ್ಟವರಿಗೆ ಕಿರುಕುಳ, ಅವಮಾನ, ದಂಡನೆ ವಿಧಿಸಲಾಗುತ್ತಿದೆ. ಗ್ರಾಮಾಂತರ ಪ್ರದೇಶದ 68 ವಿದ್ಯಾರ್ಥಿನಿಯರಿಗೆ ನ್ಯಾಯ ದೊರಕಿಸಿಕೊಡುವವರಿಲ್ಲವೇ? ಮಹಿಳೆಯರ ಸಹಜ ದೈಹಿಕ ಕ್ರಿಯೆಯನ್ನು ಭವಿಷ್ಯದ ಮಾನವ ಜನಾಂಗದ ಸೃಷ್ಟಿಕ್ರಿಯೆಯನ್ನು ಅಪವಿತ್ರತೆಯ ಮಾನದಂಡವಾಗಿಸುವ ಪುರುಷರ ಪಾವಿತ್ರ್ಯತೆಯನ್ನು ಪ್ರಶ್ನಿಸುವ ಸಮಯ ಬಂದಿದೆ. ಎಲ್ಲಾ ಹೆಣ್ಣು ಮಕ್ಕಳು ಈ ದಿಸೆಯಲ್ಲಿ ಚಿಂತಿಸುತ್ತಾ ವಿಶ್ವವಿದ್ಯಾಲಯದ ವಿರುದ್ಧ ಕ್ರಮಕೈಗೊಳ್ಳಲು ಪ್ರಧಾನಿ ಅವರಿಗೆ ಪತ್ರ ಬರೆಯುತ್ತಾ, ಪತ್ರ ಚಳುವಳಿ ನಡೆಯಲಿ ಎಂದು ಆಶಿಸುತ್ತೇನೆ. ಮತ್ತೊಂದು ಆಘಾತಕಾರಿ ಘಟನೆ ಉತ್ತರ ಪ್ರದೇಶದ ಬುಲಂದ್‌ಷಹರ್‌ನಲ್ಲಿ ನಡೆದಿರುವುದು, ಪ್ರಜಾಪ್ರಭುತ್ವದಲ್ಲಿ ಪುರುಷರಿಗೇ ಮಾತ್ರ ದಕ್ಕಿದೆಯೇ ಎಂದು ಪ್ರಶ್ನಿಸಿಕೊಳ್ಳುವಂತಿದೆ. ಹದಿನಾರು ವರ್ಷದ ಹೆಣ್ಣುಮಗಳನ್ನೂ ಅಕ್ರಮವಾಗಿ ಸಾಕಾಣಿಕೆ ಮಾಡಿ ಹರಾಜು ಹಾಕಿದ ಕೃತ್ಯ, 80,000/– ರೂ.ಗಳಿಗೆ ಹರಾಜು ಕೂಗಿದ್ದು ಇವೆಲ್ಲವೂ, ಅನಾಥರಾಗುವ ಹೆಣ್ಣು ಮಕ್ಕಳ ಅಸಹನೀಯ ಪರಿಸ್ಥಿತಿಯ ದ್ಯೋತಕವಾಗಿದೆ. ಮಹಿಳೆಯರ ಸಮಾನತೆಯ ಪ್ರಶ್ನೆ ಇರಲಿ; ಆಕೆ ನೆಮ್ಮದಿಯ ಜೀವನವಿಲ್ಲವೇ? ಎಂದು ನಮ್ಮೊಳಗಿನ ಮಹಾತ್ಮಾಜಿ ಮತ್ತು ಅಂಬೇಡ್ಕರ್ ಅವರು ಪ್ರಶ್ನಿಸುತ್ತಾರೆ.



ಕರ್ನಾಟಕದಿಂದ ಲೋಕಸಭೆಗೆ ಆರಿಸಲ್ಪಟ್ಟ ಒಬ್ಬ ಸದಸ್ಯ ಮಹಾತ್ಮಾಜಿ ಅವರನ್ನು ಕುರಿತು ದಿ.4.2.2020ರಂದು ಆಡಿದ ಮಾತುಗಳು ಮಾಧ್ಯಮಗಳ ಮೂಲಕ ತಿಳಿದು ಬಂದಿದೆ. ಈ ವಿಷಯದಲ್ಲಿ ಭಾರತದ ಸಮಗ್ರತೆ, ಅಖಂಡ ದೇಶವಾಗಿ ಭಾರತವನ್ನು ಕಟ್ಟಲು ಕಾರಣವಾದ ಮಹಾತ್ಮಾಜಿ ಅವರ ಅಹಿಂಸಾತ್ಮಕ ಸತ್ಯಾಗ್ರಹ ಮಾರ್ಗಗಳನ್ನು ಕ್ಷುಲ್ಲಕ ಹೇಳಿಕೆಗಳ ಮೂಲಕ ಅವಮಾನಿಸಿದ ಮಾನ್ಯ ಅನಂತಕುಮಾರ್ ಹೆಗ್ಡೆ ಅವರಿಗೆ ಜನರು ಛೀಮಾರಿ ಹಾಕಿರುವುದು, ಚರಿತ್ರೆಯ ಗಂಧಗಾಳಿ ಅರಿಯದ, ಲೋಕಸಭಾ ಸದಸ್ಯರಾಗಲು ಅರ್ಹತೆ ಇಲ್ಲದವರೆಂದು ಹೇಳುತ್ತಿರುವುದು ಸತ್ಯದ ಮಾತಾಗಿದೆ. ಸನ್ಮಾನ್ಯ ಪ್ರಧಾನಿ ಮಂತ್ರಿಗಳು ಅವರನ್ನು ಖಂಡಿಸಿರುವುದೂ ಮಾಧ್ಯಮಗಳಲ್ಲಿ ಭಿತ್ತರವಾಗಿದೆ. ಹಾಗೆಯೇ ಗಾಂಧಿ ಭವನದ ಅಧ್ಯಕ್ಷರು ಸಹ ಲೋಕಸಭಾ ಸದಸ್ಯರ ಹೇಳಿಕೆ ಖಂಡಿಸಿ, ಪತ್ರಿಕಾ ಹೇಳಿಕೆಯನ್ನು ಕೊಟ್ಟಿರುವುದನ್ನು ಈ ಪತ್ರಿಕೆಯಲ್ಲಿ ಓದುಗರಿಗೆ ಕೊಡಲಾಗಿದೆ. ಅದರಂತೆ ದಿ. 04.02.2020ರ ಹಿಂದೂ ಪತ್ರಿಕೆಯಲ್ಲಿ ಮಾನ್ಯ ಲೋಕಸಭಾ ಸದಸ್ಯರ ಹೇಳಿಕೆಯನ್ನು ಖಂಡಿಸಿ, ಗಾಂಧಿ ಭವನದ ಉಪಾಧ್ಯಕ್ಷರಾದ ವಿ.ಎನ್. ತಿಪ್ಪನಗೌಡ ಅವರು ನೀಡಿರುವ ನುಡಿಗಳು ತರ್ಕಬದ್ಧವಾದುದಾಗಿದೆ. ತಾವೂ ಸಹ ಇದನ್ನು ಬೆಂಬಲಿಸಬೇಕಾಗಿಯೂ ಮತ್ತು ಪತ್ರ ಚಳುವಳಿ ಆರಂಭಿಸಿ ಇಂಥಹ ಹೇಳಿಕೆಗಳು ಪುನರಪಿಗೊಳ್ಳದಿರಲು ಸಹಕರಿಸಿರಿ ಎಂದು ವಿನಂತಿಸುತ್ತೇನೆ.



ಮೊದಲನೆಯ ಮೊಕದ್ದಮೆ

ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ – 3

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

ಬೊಂಬಾಯಿಯಲ್ಲಿರುತ್ತಾ ನಾನು ಒಂದು ಕಡೆ ಹಿಂದೂಸ್ತಾನದ ಕಾಯಿದೆ ಕುರಿತು ನನ್ನ ಅಭ್ಯಾಸವನ್ನೂ ಮತ್ತೊಂದು ಕಡೆ ಆಹಾರದ ವಿಷಯದಲ್ಲಿ ನನ್ನ ಪ್ರಯೋಗಗಳನ್ನೂ ಪ್ರಾರಂಭಿಸಿದೆ. ಈ ಪ್ರಯೋಗಗಳಲ್ಲಿ ನನ್ನೊಂದಿಗೆ ನನ್ನ ಮಿತ್ರನಾದ ವೀರಚಂದ್ ಗಾಂಧಿ ಸಹ ಸೇರಿಕೊಂಡ. ನಮ್ಮಣ್ಣ ನನಗೆ ಮೊಕದ್ದಮೆಗಳನ್ನು ಸಂಪಾದಿಸಿಕೊಡಲು ತಮ್ಮ ಕೈಯಲ್ಲಾದ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದರು.

ಹಿಂದೂಸ್ಥಾನದ ಕಾನೂನುಗಳನ್ನು ವ್ಯಾಸಂಗ ಮಾಡುವುದು ಬಹಳ ಬೇಸರದ ಕೆಲಸವಾಗಿತ್ತು. ಸಿವಿಲ್‌ಪ್ರೊಸೀಜರ್ ಕೋಡ್ ನನ್ನ ತಲೆಗೆ ಹತ್ತಲೇ ಇಲ್ಲ. ಅದರೆ ಎವಿಡೆನ್ಸ್ ಆಕ್ಸ್ (ಸಾಕ್ಷ್ಯಕ್ಕೆ ಸಂಬಂಧಿಸಿದ ಕಾನೂನು) ಹಾಗೆ ಇರಲಿಲ್ಲ. ವೀರಚಂದ್ ಗಾಂಧಿ ಸಾಲಿಸಿಟರ್ ಪರೀಕ್ಷೆಗೆ ಓದುತ್ತಿದ್ದ. ಆತ ನನಗೆ ಬ್ಯಾರಿಸ್ಟರುಗಳು, ವಕೀಲರು ಇವರನ್ನು ಕುರಿತು ಅನೇಕ ಬಗೆಯ ಕಥೆಗಳನ್ನು ಹೇಳುತ್ತಿದ್ದ. ಆತ ಹೀಗೆ ಹೇಳುತ್ತಿದ್ದ: "ಸರ್ ಫಿರೂಜ್‌ರವರ ಶಕ್ತಿ ಅಡಗಿರುವುದು ಅವರ ಅಗಾಧ ಕಾನೂನಿನ ಜ್ಞಾನದಲ್ಲಿ. ಎವಿಡೆನ್ಸ್ ಆಕ್ಟ್ ಅವರಿಗೆ ಹೃದ್ಗತವಾಗಿದೆ. ಮೂವತ್ತೆರಡನೆಯ ವಿಧಿಗೆ ಸಂಬಂಧಪಟ್ಟ ಪ್ರತಿಯೊಂದು ಮೊಕದ್ದಮೆಯೂ ಅವರಿಗೆ ಗೊತ್ತು. ಬದ್ರುದ್ದೀನ್ ತೈಯಬ್ಜೀ ಅವರ ಅದ್ಭುತವಾದ ಶಕ್ತಿ ಜಡ್ಜ್‌ಗಳಿಂದ ಸಹ ಅವರಿಗೆ ಗೌರವವನ್ನು ಸಂಪಾದಿಸಿಕೊಡುತ್ತದೆ."

ಇಂತಹ ಅತಿರಥ ಮಹಾರಥರ ಕಥೆಗಳನ್ನು ಕೇಳಿದಾಗಲೆಲ್ಲ ನನ್ನ ಧೈರ್ಯ ಉಡುಗಿ ಹೋಗುತ್ತಿತ್ತು.

ವೀರ್‌ಚಂದ್‌ಗಾಂಧೀ ಹೀಗೂ ಹೇಳುತ್ತಿದ್ದನು. "ಐದು ವರ್ಷ, ಏಳು ವರ್ಷ ಕೆಲಸವೇ ಇಲ್ಲದೆ ಕೋರ್ಟುಗಳಲ್ಲಿ ಕುಳಿತು ಕಾಲ ಕಳೆಯುವುದು ಬ್ಯಾರಿಸ್ಟರಿಗೆ ಏನೂ ಅಪರೂಪವಲ್ಲ. ಆದುದರಿಂದಲೇ ನಾನು ಸಾಲಿಸಿಟರ್ ಪದವೀಧರನಾಗಲು ನಿರ್ಧರಿಸಿರುವುದು. ಮೂರು ವರ್ಷ ಕಾಲದೊಳಗೆ ನಿನ್ನ ಜೀವನದ ವೆಚ್ಚವನ್ನು ಹುಟ್ಟಿಸಿಕೊಳ್ಳಲು ನಿನಗೆ ಸಾಧ್ಯವಾಗುವುದಾದರೆ ನೀನು ಅದೃಷ್ಟಶಾಲಿಯೆಂದು ಭಾವಿಸಬೇಕು."

ನನ್ನ ವೆಚ್ಚ ತಿಂಗಳು ತಿಂಗಳಿಗೂ ಏರುತ್ತಿತ್ತು. ಒಳಗಡೆ ಬ್ಯಾರಿಸ್ಟರ್ ಕಸುಬಿಗೆ ಸಿದ್ಧವಾಗುತ್ತಾ, ಹೊರಗಡೆ ಬ್ಯಾರಿಸ್ಟರ್ ಎಂಬ ವಿಳಾಸದ ಹಲಗೆಯನ್ನು ತಗುಲುಹಾಕಿಕೊಳ್ಳಲು ನನ್ನ ಮನಸ್ಸು ಒಪ್ಪಲಿಲ್ಲ. ಆದುದರಿಂದ ನಾನು ನನ್ನ ವ್ಯಾಸಂಗಕ್ಕೆ ಪೂರ್ಣ ಗಮನವನ್ನು ಕೊಡಲು ಸಾಧ್ಯವಾಗಲಿಲ್ಲ. ನನಗೆ ಎವಿಡೆನ್ಸ್ ಆಕ್ಟ್ ಇಷ್ಟವಾಯಿತು, ಮೇಯಿನ್ ಅವರ ಹಿಂದೂ ಲಾ ಎಂಬ ಗ್ರಂಥವನ್ನು ನಾನು ತುಂಬ ಉತ್ಸಾಹದಿಂದ ಓದಿದೆ. ಆದರೆ ಒಂದು ಮೊಕದ್ದಮೆಯನ್ನೂ ನಡೆಸಲು ನನಗೆ ಧೈರ್ಯವುಂಟಾಗಲಿಲ್ಲ. ಅತ್ತೆಯ ಮನೆಗೆ ಹೊಸದಾಗಿ ಬಂದ ಸೊಸೆಯಂತೆ, ನನ್ನ ನಿಸ್ಸಾಹಾಯಕತೆ ವರ್ಣನಾತೀತವಾಗಿತ್ತು.

ಆ ಸಮಯಕ್ಕೆ ನಾನು ಮಾಮಿಬಾಯಿ ಎಂಬವಳ ಒಂದು ಮೊಕದಮೆಯನ್ನು ಹಿಡಿದೆನು. ಅದೊಂದು ಸ್ಮಾಲ್ ಕಾಸ್ ದಾವೆ. "ನೀನು ದಳ್ಳಾಳಿಗೆ ಹಣ ಕೊಡಬೇಕಾಗುತ್ತದೆ" ಎಂದು ಹೇಳಿದರು. ನಾನು ಕೊಡಲು ಖಂಡಿತವಾಗಿ ತಿರಸ್ಕರಿಸಿದೆ.

"ಆದರೆ ತಿಂಗಳಿಗೆ ಮೂರು ಸಾವಿರ, ನಾಲ್ಕು ಸಾವಿರ ಸಂಪಾದಿಸುತ್ತಿರುವ ದೊಡ್ಡ ಕ್ರಿಮಿನಲ್ ಲಾಯರುಗಳು ಸಹ ದಳ್ಳಾಳಿಗೆ ಹಣ ಕೊಡುತ್ತಾರೆ' ಎಂದರು.

"ನಾನು ಅವರನ್ನು ಅನುಕರಿಸಬೇಕಾದುದಿಲ್ಲ, ತಿಂಗಳಿಗೆ 300 ರೂಪಾಯಿ ಸಂಪಾದನೆಯಾದರೆ ನನಗೆ ಅದು ಸಾಕು. ನಮ್ಮ ತಂದೆ ಅದಕ್ಕಿಂತ ಹೆಚ್ಚು ಸಂಪಾದಿಸಲಿಲ್ಲ" ಎಂದು ಉತ್ತರ ಕೊಟ್ಟೆ.

"ಆದರೆ ಆ ಕಾಲವೆಲ್ಲ ಹೋಯಿತು. ಬೊಂಬಾಯಿಯಲ್ಲಿ ಖರ್ಚು ಮಿತಿಮೀರಿ ಏರುತ್ತಿದೆ. ಸ್ವಲ್ಪ ವ್ಯವಹಾರಜ್ಞರಾಗಿ ನಡೆದುಕೊಳ್ಳಬೇಕು."

ನನ್ನ ಮನಸ್ಸು ವಜ್ರದಂತೆ ದೃಢವಾಗಿತ್ತು. ನಾನು ದಳ್ಳಾಳಿಗೆ ಹಣವನ್ನು ಕೊಡಲಿಲ್ಲ. ಆದರೂ

ಮಾಮಿಬಾಯಿ ಮೊಕದ್ದಮೆ ನನಗೇ ಬಂತು. ಅದೊಂದು ಸುಲಭವಾದ ಮೊಕದ್ದಮೆ. ನಾನು ಮೂವತ್ತು ರೂಪಾಯಿ ಶುಲ್ಕವನ್ನು ತೆಗೆದುಕೊಂಡೆ. ಆ ಮೊಕದ್ದಮೆ ಒಂದೇ ದಿನದಲ್ಲಿ ಮುಗಿದುಹೋಗುವ ಸಂಭವವಿತ್ತು,


ಸ್ಮಾಲ್‌ಕಾಸ್ ಕೋರ್ಟಿಗೆ ಅದೇ ನನ್ನ ಮೊದಲ ಪ್ರವೇಶ, ನಾನು ಪ್ರತಿವಾದಿಯ ಪಕ್ಷದ ವಕೀಲನಾಗಿದ್ದೆ. ವಾದಿಯ ಪಕ್ಷದ ಸಾಕ್ಷಿಗಳನ್ನು ನಾನು ಪಾಟಿ ಸವಾಲು ಮಾಡಬೇಕಾಗಿತ್ತು. ನಾನು ಎದ್ದು ನಿಂತೆ, ಆದರೆ ನನ್ನ ಧೈರ್ಯ ಪೂರ್ತಿ ಮಾಯವಾಯಿತು. ನನ್ನ ತಲೆ ತಿರುಗುತ್ತಿತ್ತು. ಕೋರ್ಟು ಸಹ ಹಾಗೆಯೇ ತಿರುಗುತ್ತಿರುವಂತೆ ನನಗೆ ಭಾಸವಾಯಿತು. ಪಾಟಿ ಸವಾಲು ಮಾಡಲು ನನಗೆ ಪ್ರಶ್ನೆಯೇ ಹೊಳೆಯಲಿಲ್ಲ. ನ್ಯಾಯಾಧಿಪತಿ ನಕ್ಕಿರಬೇಕು. ವಕೀಲರಿಗೆ ನನ್ನ ಫಜೀತಿ, ವಿನೋದ ಹುಟ್ಟಿಸಿರಬೇಕು. ಆದರೆ ಇದಾವುದನ್ನೂ ನಾನು ನೋಡಲಾರದವನಾಗಿದ್ದೆ. ನಾನು ದಳ್ಳಾಳಿಗೆ "ಮೊಕದ್ದಮೆಯನ್ನು ನಡೆಸಲು ನನ್ನಿಂದ ಸಾಧ್ಯವಿಲ್ಲ. ಶ್ರೀ ಪಟೇಲರನ್ನು ಗೊತ್ತುಮಾಡಿಕೊಳ್ಳಿ. ನಾನು ತೆಗೆದುಕೊಂಡಿರುವ ಶುಲ್ಕವನ್ನು ಹಿಂದಕ್ಕೆ ಕೊಡುತ್ತೇನೆ" ಎಂದು ಹೇಳಿ ಕುಳಿತುಬಿಟ್ಟೆ. ಪಟೇಲರನ್ನು ಐವತ್ತೊಂದು ರೂಪಾಯಿಗಳಿಗೆ ಗೊತ್ತು ಮಾಡಿಕೊಂಡರು. ಅವರಿಗೆ ಮೊಕದ್ದಮೆ ಮಕ್ಕಳ ಆಟದಂತಿತ್ತು.

ನನ್ನ ಕಕ್ಷಿದಾರನಿಗೆ ಜಯವಾಯಿತೋ ಇಲ್ಲವೋ ಅದನ್ನು ತಿಳಿದುಕೊಳ್ಳದೇ ನಾನು ಕೋರ್ಟಿನಿಂದ ಧಾವಿಸಿದೆ. ನನಗೆ ನಾಚಿಕೆಯಾಗಿತ್ತು. ಮೊಕದ್ದಮೆಗಳನ್ನು ನಡೆಸುವ ಧೈರ್ಯ ಬರುವವರೆಗೆ ಬೇರೊಂದು ಮೊಕದ್ದಮೆ ಹಿಡಿಯಬಾರದೆಂದು ನಿರ್ಣಯಿಸಿದೆ. ವಾಸ್ತವವಾಗಿ ನಾನು ದಕ್ಷಿಣ ಆಫ್ರಿಕಾಕ್ಕೆ ಹೋಗುವವರೆಗೆ ಮತ್ತೆ ಕೋರ್ಟಿಗೆ ಹೋಗಲೇ ಇಲ್ಲ. ಈ ನಿರ್ಣಯದಲ್ಲಿ ನನ್ನ ಸದ್ಗುಣವೇನೂ ಇರಲಿಲ್ಲ. ಬೇರೆ ದಾರಿಯಿಲ್ಲದುದರಿಂದ ನಾನು ಈ ತೀರ್ಮಾನಕ್ಕೆ ಬಂದೆ. ಕಳೆದುಕೊಳ್ಳುವುದಕ್ಕಾಗಿಯೇ ನನ್ನಲ್ಲಿಗೆ ಮೊಕದ್ದಮೆಗಳನ್ನು ತರುವಷ್ಟು ಮೂಢರು ಯಾರೂ ಇರಲಿಲ್ಲ.

> ನನಗೆ ಜಾತಿ, ಧರ್ಮದ ಹಂಗಿಲ್ಲ, ದೇವಸ್ಥಾನಗಳಿಗೆ ಕಾಲಿಡುವುದಿಲ್ಲ ಆದರೆ ಗಾಂಧೀಜಿಯ ವ್ಯಕ್ತಿತ್ವ, ಮೌಲ್ಯಗಳನ್ನು ತಿಳಿಯಲು ಈಗಲೂ ಅವರು ಸಂಚರಿಸಿದ ಸ್ಥಳಗಳಿಗೆ ತೆರಳುತ್ತೇನೆ, ಅದೇ ನನಗೆ ತೀರ್ಥಕ್ಷೇತ್ರ
>
> - ಡಾ. ಎನ್. ಜಗದೀಶ್ ಕೊಪ್ಪ, ಸಾಹಿತಿ

ಆದರೆ ಬೊಂಬಾಯಿಯಲ್ಲಿ ನನಗೆ ಮತ್ತೊಂದು ಮೊಕದ್ದಮೆ ಕಾದಿತ್ತು. ಅದು ಬರಿಯ ಒಂದು ಅರ್ಜಿಯನ್ನು ಬರೆಯುವುದು. ಪೋರ್‌ಬಂದರ್‌ನಲ್ಲಿ ಒಬ್ಬ ಬಡ ಮುಸಲ್ಮಾನನ ಜಮೀನನ್ನು ಮುಟ್ಟುಗೋಲು ಹಾಕಿಕೊಂಡಿದ್ದರು. ಅವನು ನಮ್ಮ ತಂದೆಯ ಹೆಸರನ್ನು ಕೇಳಿ ನಾನೂ ನಮ್ಮ ತಂದೆಯಂತೆಯೇ ಯೋಗ್ಯನಾಗಿರಬೇಕೆಂದು ಭಾವಿಸಿ ನನ್ನ ಬಳಿ ಬಂದಿದ್ದ. ಆತನ ಪಕ್ಷ ದುರ್ಬಲವಾಗಿದ್ದಂತೆ ನನಗೆ ತೋರಿತು. ಆದರೆ ನಾನು ಅರ್ಜಿಯನ್ನು ಬರೆಯಲು ಒಪ್ಪಿದೆ. ಅರ್ಜಿಯನ್ನು ಅಚ್ಚುಮಾಡುವ ವೆಚ್ಚವನ್ನು ಅವನು ವಹಿಸಬೇಕಾಗಿತ್ತು. ನಾನು ಅರ್ಜಿಯನ್ನು ಬರೆದು ಮಿತ್ರರಿಗೆ ಓದಿ ಹೇಳಿದೆ. ಅವರು ಅದನ್ನು ಒಪ್ಪಿದರು. ಅರ್ಜಿಯನ್ನು ಬರೆಯಲು ನನಗೆ ಯೋಗ್ಯತೆಯಿದೆ ಎಂದು ನನಗೆ ತಕ್ಕ ಮಟ್ಟಿಗೆ ಧೈರ್ಯವುಂಟಾಯಿತು. ನಿಜವಾಗಿಯೂ ನನಗೆ ಆ ಯೋಗ್ಯತೆ ಇತ್ತು.

ಶುಲ್ಕವನ್ನು ತೆಗೆದುಕೊಳ್ಳದೆಯೇ ನಾನು ಅರ್ಜಿಯನ್ನು ಬರೆಯುವವನಾಗಿದ್ದರೆ, ನನ್ನ ವೃತ್ತಿ ಚೆನ್ನಾಗಿಯೇ ನಡೆಯುವುದಾಗಿದ್ದಿತು. ಆದರೆ ಹೊಟ್ಟೆಯ ಪಾಡಿಗೆ ದಾರಿ ಬೇಕಲ್ಲ, ಉಪಾಧ್ಯಾಯರ ವೃತ್ತಿಯನ್ನು ಅಂಗೀಕರಿಸೋಣ ಎಂದು ನಾನು ಯೋಚಿಸಿದೆ. ನನ್ನ ಇಂಗ್ಲಿಷ್ ಭಾಷಾಜ್ಞಾನ ಉತ್ತಮವಾಗಿತ್ತು. ಯಾವುದಾದರೂ ಶಾಲೆಯಲ್ಲಿ ಮೆಟ್ರಿಕುಲೇಷನ್ ವಿದ್ಯಾರ್ಥಿಗಳಿಗೆ ಇಂಗ್ಲಿಷನ್ನು ಕಲಿಸುವುದು ನನಗೆ ಪ್ರಿಯವಾಗಿತ್ತು. ಹೀಗೆ ನನ್ನ ಖರ್ಚಿನ ಸ್ವಲ್ಪ ಭಾಗವನ್ನಾದರೂ ನಾನು ಸಂಪಾದಿಸಿಕೊಳ್ಳಲು ಸಹಾಯವಾಗುತ್ತಿತ್ತು. ಒಂದು ಜಾಹಿರಾತು ನನ್ನ ಕಣ್ಣಿಗೆ ಬಿತ್ತು, "ನಿತ್ಯ ಒಂದು ಗಂಟೆ ಪಾಠ ಹೇಳುವ ಒಬ್ಬ ಇಂಗ್ಲಿಷ್ ಉಪಾಧ್ಯಾಯರು ಬೇಕು ತಿಂಗಳಿಗೆ ಎಪ್ಪತ್ತೈದು ರೂಪಾಯಿ." ಅದೊಂದು ಪ್ರಸಿದ್ಧವಾದ ಪಾಠಶಾಲೆಯ ಜಾಹಿರಾತು. ನಾನು ಆ ಕೆಲಸಕ್ಕೆ ಅರ್ಜಿ ಹಾಕಿದೆ. ಹೋಗಿ ಭೇಟಿ ಮಾಡಬೇಕೆಂದು ಕರೆ ಬಂತು. ನಾನು ಉತ್ಸಾಹದಿಂದ ಹೋದೆ. ಆದರೆ ನಾನು ಪದವೀಧರನಲ್ಲ ಎಂಬುದು ಗೊತ್ತಾದ ಕೂಡಲೇ, ಪ್ರಿನ್ಸಿಪಾಲರು ವಿಷಾದದಿಂದ ನನ್ನ ಅರ್ಜಿಯನ್ನು ತಿರಸ್ಕರಿಸಿದರು. ಆದರೆ "ನಾನು ಲಂಡನ್ ಮೆಟ್ರಿಕುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದೇನೆ, ಲ್ಯಾಟಿನ್ ನನ್ನ ದ್ವಿತೀಯ ಭಾಷೆ" ಎಂದೆ.



ಒಬ್ಬ ಕೆಲಸಗಾರನ ಹೋರಾಟ

ಮೋ. ಕ. ಗಾಂಧಿ (ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ)

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

ಕಿಶೋರಲಾಲ ಮಶ್ರೂವಾಲಾ ಬರೆದ ಪತ್ರದಿಂದ ಇದನ್ನು ತೆಗೆದುಕೊಂಡಿದ್ದೇನೆ. ಈ ಪತ್ರ ಬರೆದವರು ಉನ್ನತ ವಿದ್ಯೆ ಪಡೆದ, ಸ್ವಾರ್ಥಕ್ಕಾಗಿ ಕೆಲಸಗಾರರು ಒಬ್ಬರು. ಒಬ್ಬ ಪ್ರಾಮಾಣಿಕ ಕೆಲಸಗಾರನ ಹೋರಾಟದ ಚಿತ್ರವನ್ನು ಇದಿರಿಗೆ ಇಟ್ಟು, ಇಂಥ ಸೇವಾಮಯ ಜೀವನ ನಡೆಸುವ ಎಲ್ಲರಿಗೂ ಇದರ ಉಪಯೋಗವಾದೀತೆಂದು ಬಯಸಿದ್ದೇನೆ.

ಈ ಪ್ರಯತ್ನ ಸ್ತುತ್ಯ. ಪತ್ರಲೇಖಕನೂ ಆತನ ಸಹಕಾರ್ಯಕರ್ತರೂ ತಾವು ತಪ್ಪು ಮಾಡಿದೆವು ಎಂದು ತಿಳಿದಾಗ, ಅದನ್ನು ತಿದ್ದಿಕೊಳ್ಳಲು ಹಿಂಜರಿಯುವುದಿಲ್ಲ.

ಈ ಪತ್ರದಿಂದ ಉದ್ಭವಿಸಿದ ಪ್ರಶ್ನೆಗಳಿಗೆ ಕಿಶೋರಲಾಲಭಾಯಿ ಏನು ಉತ್ತರ ಕೊಟ್ಟಿದ್ದಾರೋ ಗೊತ್ತಿಲ್ಲ. ನನ್ನ ಮಟ್ಟಿಗೆ ನಾನು ಕೆಲವು ಮಾತನ್ನು ಹೇಳಿದರೆ ಇದರಿಂದ ಪ್ರಯೋಜನವಾದೀತು ಎಂದು ನಂಬಿದ್ದೇನೆ.

ಬ್ರೆಡ್ ಲೇಬರ್ (ಕಾಯಕದಿಂದ ಊಟ) ತತ್ವದ ಬಗ್ಗೆ ಸ್ವಲ್ಪ ಗೊಂದಲ ಇದೆ ಈ ಪತ್ರದಲ್ಲಿ. ಸಮಾಜ ಸೇವೆಗೂ ಅದಕ್ಕೂ ವಿರೋಧವಿಲ್ಲ. ಬುದ್ಧಿವಂತತನದ ಬ್ರೆಡ್ ಲೇಬರ್ ಎಂದಿದ್ದರೂ ಉತ್ತಮ ಸಮಾಜ ಸೇವೆ ದೇಶದ ಸಂಪತ್ತಿಗೆ ತಾನು ಕೈಯ್ಯಾರೆ ದುಡಿದು, ಅದನ್ನು ಹೆಚ್ಚಿಸುವುದಕ್ಕಿಂತ ಬೇರೆ ಏನಿದೆ ಮನುಷ್ಯ ಮಾಡಬಹುದಾದುದು? ಹಾಗೆ ಮಾಡುವುದರಿಂದಲೇ ಮನುಷ್ಯ.

ಶ್ರಮ ಎಂಬುದಕ್ಕೆ 'ಬುದ್ಧಿವಂತ' ಎಂಬ ವಿಶೇಷಣ ಜೋಡಿಸಿ ಸಮಾಜಸೇವೆ ಆಗಬೇಕಾದರೆ, ಶ್ರಮಕ್ಕೆ ಒಂದು ಸ್ಪಷ್ಟ ಉದ್ದೇಶ ಇರಬೇಕೆಂದು ಹೇಳಲಾಗಿದೆ. ಇಲ್ಲದೇ ಇದ್ದರೆ ಪ್ರತಿಯೊಬ್ಬ ಕೆಲಸಗಾರನೂ ತಾನು ಸಮಾಜಸೇವೆ ಮಾಡಿದೆ ಎನ್ನಬಹುದು. ಅವನದೂ ಒಂದು ಬಗೆಯಲ್ಲಿ ಸಮಾಜಸೇವೆಯೇ. ಆದರೆ ಇಲ್ಲಿ ಅದಕ್ಕಿಂತ ಹೆಚ್ಚಿನ ಅರ್ಥ. ಸರ್ವರ ಹಿತಕ್ಕಾಗಿ ದುಡಿಯುವವನು ಸಮಾಜಸೇವೆ ಮಾಡುತ್ತಾನೆ. ಅವನ ದುಡಿತಕ್ಕೆ ಬೆಲೆ ಉಂಟು. ಆದ್ದರಿಂದ ಹಾಗೆ ಅನ್ನಕ್ಕಾಗಿ ದುಡಿಯುವುದು ಸಮಾಜಸೇವೆಯೇ ವಿನಾ ಬೇರೆ ಅಲ್ಲ. ತನ್ನ ಉದರಂಭರಣಕ್ಕಾಗಿ ಅಥವಾ ಕುಟುಂಬಕ್ಕಾಗಿ ಜನಕೋಟಿ ಮಾಡುವ ಕೆಲಸವನ್ನು ಸಮಾಜಸೇವಕ ಸರ್ವಜನ ಹಿತಕ್ಕಾಗಿ ಮಾಡುತ್ತಾನೆ. ಆಶ್ರಮದಲ್ಲಿರುವ ಏಳು ಜನಕ್ಕೆ ತಮ್ಮ ದಿನದ ಹಿಟ್ಟನ್ನು ಗಳಿಸಲು, ಮಾಡಿದ ದುಡಿತದ ತರುವಾಯ ಸಮಾಜಸೇವೆಗೆ ವೇಳೆ ಉಳಿಯುವುದೇ ಇಲ್ಲ. ತಮ್ಮ ಕೆಲಸದಲ್ಲಿ ಅವರು ನಿಷ್ಣಾತರಾಗಿದ್ದರೆ ಹೀಗೆ ಆಗುತ್ತಿರಲಿಲ್ಲ. ಅವರು ನಿಷ್ಣಾತರಲ್ಲ. ಸಾಧಾರಣ ಕೆಲಸಗಾರರಿಗೆ ಇವರು ಸಮ ಅಲ್ಲ. ಕೈಗಾರಿಕೆಯಲ್ಲಿ ಇವರು ಹೊಸಬರು. ಉಪಕರಣಗಳನ್ನು ಜಾಣತನದಿಂದ ಉಪಯೋಗಿಸಿದರೆ ಒಂದಕ್ಕೆ ಎರಡು ಪಟ್ಟು ನೂಲಬಹುದು ಎಂದು ಈಚೆಗೆ ಎಲ್ಲರಿಗೂ ಗೊತ್ತಾಗಿದೆ. ಎಂದರೆ ರಾಟೆಯಿಂದ ಇಮ್ಮಡಿ ಗಳಿಕೆ. ಎಲ್ಲ ವಿಷಯಗಳಲ್ಲೂ ಇಷ್ಟೇ ವ್ಯವಸಾಯದಲ್ಲಿಯೂ ಅಭಿವೃದ್ಧಿಗೆ ಅವಕಾಶ ಇದೆ. ಪ್ರಕೃತಿಯ ವಿಕೋಪಕ್ಕೆ ಗುರಿಯಾಗದಿದ್ದರೆ ರೈತ ತನ್ನ ಜಾಣತನದಿಂದ ಇರುವ ಮಟ್ಟನ್ನೇ ಉಪಯೋಗಿಸಿ, ಅಷ್ಟೇ ಹೊತ್ತು ಕೆಲಸಮಾಡಿ, ಒಂದಕ್ಕೆ ನಾಲ್ಕರಷ್ಟು ಗಳಿಸಬಹುದು. ಎಂದರೆ ಅವನಿಗೆ ಈಗಿನ ಸಂಪಾದನೆಗೆ ಎಷ್ಟು ಕಷ್ಟಪಡುತ್ತಿದ್ದಾನೋ ಅಷ್ಟು ಪಡಬೇಕಾಗಿಲ್ಲ. ಈ ಕೆಲಸಗಾರರಿಗೆ ಕೈ ಪಳಗಿದ ಮೇಲೆ, ಸ್ವಲ್ಪ ತೊಡಕು. ಆದರೆ ತ್ಯಾಗಜೀವನ ನಡೆಸುವ ಕೆಲಸಗಾರನಿಗೆ ತಿಂಗಳಿಗೆ ನಾಲ್ಕು ರೂಪಾಯಿ ಸಾಕು. ಇದರಿಂದ ಆತನು ತನ್ನ ಹೊಟ್ಟೆಗಾಗಿ ದುಡಿದ ಮೇಲೆ ಕೂಡ ಹೆಚ್ಚಿನ ಕೆಲಸಕ್ಕೆ ವೇಳೆ ಉಳಿಯುತ್ತದೆ.

ಆದರೆ ತಿಂಗಳಿಗೆ ಮೂರು ರೂಪಾಯಿ ಸಾಕೇ ಅನ್ನಕ್ಕೆ ಒಬ್ಬನಿಗೆ ಡಾ॥ ತಿಲಕ್ ಬೊಂಬಾಯಿಯಲ್ಲಿ ಐದು ರೂಪಾಯಿ ಸಾಕು ಎನ್ನುತ್ತಾರೆ. ಹಾಗಿದ್ದರೆ ಗ್ರಾಮ ಜೀವನಕ್ಕೆ ಮೂರು ರೂಪಾಯಿ ಸಾಕು. ತಿಲಕರು ಹೇಳಿದ್ದಕ್ಕೆ ನನ್ನ ಅನುಭವವನ್ನು ಜೊತೆಗೂಡಿಸಿದರೆ ಏನು ಕಷ್ಟವಿಲ್ಲ. ತಿಲಕರು ಹೇಳುವಂತೆ ಹಾಲನ್ನು ಬಿಡಲು ಸಾಧ್ಯವಿಲ್ಲ. ಆಹಾರದಿಂದ ಹಾಲನ್ನು ವರ್ಜ್ಯಮಾಡಿ ಆಶ್ರಮವಾಸಿಗಳು ತಪ್ಪು ಮಾಡಿದರು. ನಮ್ಮಲ್ಲಿ ಕೋಟ್ಯಂತರ ಜನಕ್ಕೆ ಒಂದು ತೊಟ್ಟೂ ಹಾಲು ಸಿಕ್ಕುವುದಿಲ್ಲ. ನಿಜ. ಆದರೆ ಇನ್ನೂ ಎಷ್ಟೋ ಪದಾರ್ಥ ಅವರಿಗೆ ಸಿಗುವುದಿಲ್ಲ ನಮಗೆ

ಬೇಕಾದ್ದು. ನಮ್ಮದು ಸೇವಾಮಯ ಜೀವನ, ಶರೀರ ಪೋಷಣೆಗೆ ಎಷ್ಟು ಅಗತ್ಯವೋ ಅಷ್ಟನ್ನು ನಾವೇ ಉತ್ಪನ್ನ ಮಾಡಿ, ತೆಗೆದುಕೊಳ್ಳಬೇಕು. ಗೋಧಿ, ಅಕ್ಕಿ, ಸಜ್ಜೆ, ಜೋಳ ಇಂಥ ಧಾನ್ಯ ಪಕ್ವ ಮಾಡಿದ ರುಚಿಯಾದ ಸೊಪ್ಪು, ಹಾಲು, ಹಳ್ಳಿಯಲ್ಲಿ ಸಿಗುವ ಹಣ್ಣು, ಮಾವು, ನೇರಲೆ, ಸೀಬೆ, ಬೋರೆ ಮುಂತಾದವು ಆಯಾ ಕಾಲದಲ್ಲಿ ಸಿಗುತ್ತವೆ. ಹಳ್ಳಿಗಳಲ್ಲಿ ಇವು ಆರೋಗ್ಯ ಜೀವನಕ್ಕೆ ತುಂಬ ಒಳ್ಳೆಯವು. ತಿನ್ನುವುದಾದರೆ ಎಲೆ ಸೊಪ್ಪುಗಳಲ್ಲಿ ಬೇವಿನ ಸೊಪ್ಪು ರಾಜ. ಭಾರತದಲ್ಲಿ ಎಲ್ಲಿ ಬೇಕಾದರೂ ಇದನ್ನು ಗಿಡಗಳಿಂದ ಹರಿದುಕೊಳ್ಳಬಹುದು. ಇನ್ನೂ ಮನುಷ್ಯ ತಿನ್ನಬಹುದಾದ ಎಷ್ಟೋ ಹುಲ್ಲು ಇದೆ. ನಮಗೆ ಅದು ಗೊತ್ತಿಲ್ಲ. ಹುಣಿಸೆ ಹಣ್ಣು ಎಲ್ಲೆಲ್ಲೂ ಸಿಗುತ್ತದೆ. ಕೆಲವರಲ್ಲಿ ಹುಣಿಸೇ ಹಣ್ಣಿನ ಬಗ್ಗೆ ಏನೋ ಒಂದು ಪೂರ್ವಗ್ರಹ ಇದೆ. ಏತಕ್ಕೋ ನನಗೆ ಅರ್ಥವಾಗುತ್ತಿಲ್ಲ. ನಿಂಬೆ ಹಣ್ಣು ಬಹಳ ತುಟ್ಟಿ ಎಂದು ಹುಣಿಸೆ ಹಣ್ಣುಗಳನ್ನು ನಾನು ಧಾರಾಳವಾಗಿ ಉಪಯೋಗಿಸುತ್ತಿದ್ದೇನೆ. ಅದರಿಂದ ನನಗೆ ಬಹಳ ಲಾಭ ಆಗಿದೆ. ಆಹಾರ ಸುಧಾರಣೆಯ ಸಂಶೋಧನೆ ಅನಂತವಾಗಿದೆ. ಜಗತ್ತಿಗೇ ಅದರ ಪರಿಣಾಮ ಬಹಳ ಆಗಬೇಕಾಗಿದೆ. ಅದರಲ್ಲೂ ಉಪವಾಸ ಸಾಯುತ್ತಿರುವ ಭಾರತದ ಬಡಬಗ್ಗರಿಗೆ ಅದು ಆರೋಗ್ಯಕರ. ರಸ್ಕಿನ್ನನ ಭಾಷೆಯಲ್ಲಿ ಎರಡೂ ಒಂದೇ-ಆರೋಗ್ಯವೇ ಭಾಗ್ಯ. ಸರಿಯಾಗಿ, ನಿಯಮಬದ್ಧವಾಗಿ ಬದುಕುವುದೇ ಒಂದು ಸೇವೆ-ಎಂಬ ವಿಚಾರ ಆಶ್ರಮದವರ ತಲೆಯಲ್ಲಿ ಸುಳಿದದ್ದು ಸರಿ. ಅವರ ಪ್ರಭಾವ ಅನಂತವಾಗಿ ತಮ್ಮ ಸುತ್ತಮುತ್ತ ಮೊದಲು ಭಾರತಕ್ಕೆ ಆಮೇಲೆ ವಿಶ್ವ-ಕ್ಕೆ ಹರಡೀತು. ಈ ಸೇವೆಯಲ್ಲಿ ವ್ಯಷ್ಟಿಯ ಕ್ಷೇಮವೇ ಸಮಷ್ಟಿಯ ಸೇವೆ; ಒಬ್ಬರ ಕ್ಷೇಮವೇ ಎಲ್ಲರ ಕ್ಷೇಮ.

ಮೋ. ಕ. ಗಾಂಧಿ
(ಹರಿಜನ)

ಲಾವಣಿ

– ಬಾಲಚಂದ್ರ ಫಾಣೇಕರ


ಜಂಗಲ ಕಾಯಿದೆ ಉಪ್ಪಿನ ಕಾಯಿದೆ ಭಂಗವ
ಮಾಡುತಲಂದಿನಿಂದ ತುರಂಗವ
ಸೇರುತಲಂದಿನಿಂದ
ಜಂಗಿ ಪರಿಷತ್ತು ಸೇರಿಸಿ ಧೈರ್ಯದಿಂದ
ದಂಗು ಬಿಡಿಸಿ ಸರಕಾರದವರನ್ನೆಲ್ಲ
ಕಂಗಾಲರಂತಾಗಿ ಮಾಡಿಹರಣ್ಣ
ಮಾತರಂ, ವಂದೇ ಮಾತರಂ

ಬಲದಲಿ ಮಿಗಿಲೆಂದು ಮೆರೆಯುವ ಸರಕಾರ
ತಲೆಯನ್ನು ಬಗ್ಗಿಸಬೇಕಾಯಿತು
ಹಳ್ಳಿಯ ಜನರಿಂದ ಸೋಲುವ ಕಾಲಬಂತು
ಪೊಳ್ಳುತನವು ದೇಶದೊಳಗೆಲ್ಲ ಬಯಲಾಯ್ತು
ಬಲವೆಲ್ಲ ಹೋಯಿತು ವಾರಂಟು ಇದ್ದಂಥ
ಜನರನ್ನು ಹುಡುಕುವುದಾಗದೆ ಹೋಯ್ತು
ಮಾತರಂ, ವಂದೇ ಮಾತರಂ

ಭೀತಿಯ ಹಾಕಲು ಯುಕ್ತಿಯ ತೆಗೆದರು
ಜಪ್ತಿಯೆನ್ನುವ ಅಸ್ತ್ರವ ಹೂಡಿ
ಬಡರೈತರ ಮನೆಗಳ ಮೊಹರು ಮಾಡಿ
ಬಲು ಲೂಟಿಯ ಮಾಡುತ ಜನರನು ಕಾಡಿ
ನೀತಿನಡಾವಳಿ ಧಿಕ್ಕಾರ ಮಾಡುತ
ಕೋತಿಯಂದದಿ ಲೂಟಿ ಮಾಡಿದರಣ್ಣ
ಮಾತರಂ, ವಂದೇ ಮಾತರಂ

ಕೇಳಿರಿ ಸರಕಾರದ ಅನ್ಯಾಯದ ಕಥೆಯನ್ನು
ಹೇಳುವೆ ನಾನಿನ್ನು ಮರುಗಬೇಡಿ
ಬಡಕೋಳಿಯ ಮರಿಗಳ ಲೂಟಿಯ ಮಾಡಿ
ಮಿಡಿ ಬಿಡದಲೆ ತೆಂಗನು ನಾಶಮಾಡಿ
ಮಿಡಿ ಮಿಡಿ ಮಿಡುಕುವ ಬಡವರ ಮಾಲನ್ನು
ಕೊಳ್ಳೆಯ ಹೊಡಕೊಂಡು ಹೋಗಿಹರಣ್ಣಾ
ಮಾತರಂ, ವಂದೇ ಮಾತರಂ ..

ಬಾರಕೂರಿನ ಚರಕ ಇದು



ಅನಾದಿ ಕಾಲದಲ್ಲಿ ನಮ್ಮ ಪೂರ್ವಜರೆನಿಸಿಕೊಂಡವರು ಯಾವುದೇ ರೀತಿಯ ಬಟ್ಟೆಯನ್ನು ತೊಡುತ್ತಿರಲಿಲ್ಲ. ಕಾಲ ಬದಲಾದಂತೆ ಮೈ ಮುಚ್ಚಿಕೊಳ್ಳಲು ಮರದ ತೊಗಟೆ, ಸೊಪ್ಪು, ಪ್ರಾಣಿಗಳ ಚರ್ಮ ಮುಂತಾದವುಗಳನ್ನು ಬಳಸಲಾರಂಭಿಸಿದರು. ಕ್ರಮೇಣ ಬಟ್ಟೆಯನ್ನು ತೊಡಲಾರಂಭಿಸಿದರು. ಈ ಬಟ್ಟೆಯನ್ನು ಕೈಮಗ್ಗ, ಚರಕ ಮುಂತಾದವುಗಳಿಂದ ನೂಲನ್ನು ತೆಗೆದು ತಯಾರಿಸುತ್ತಿದ್ದರು. ಗಾಂಧೀಜಿ ಅವರು ಕೂಡಾ ಚರಕದಿಂದ ನೂಲನ್ನು ತೆಗೆಯುತ್ತಿದ್ದರೆಂದು ನಾವು ಕೇಳಿ ತಿಳಿದಿದ್ದೇವೆ. ಅಂತಹ ಒಂದು ಚರಕ ಇಲ್ಲಿದೆ. ಇದು ಸ್ವಾತಂತ್ರ್ಯ ಪೂರ್ವದ ಚರಕ. ಇದರಿಂದ ನೂಲನ್ನು ತೆಗೆದು ಬಟ್ಟೆ ತಯಾರಿಸುತ್ತಿದ್ದರು. ಇದು ಇಂದಿಗೂ ಸುಸ್ಥಿತಿಯಲ್ಲಿದೆ. ಇದು ಈಗ ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಬಾರಕೂರಿನ ಮಕ್ಕಿಬೈಲು ರಾಘವೇಂದ್ರ ರಾಯರ ಮನೆಯಲ್ಲಿದ್ದು ಇದನ್ನು ಬಹಳ ಜತನದಿಂದ ಕಾಪಾಡಿಕೊಂಡು ಬಂದಿದ್ದಾರೆ.

ಕೃಪೆ : ಸುಧಾ ಜನವರಿ 2020



ಮದ್ಯಪಾನದ ಪರಿಣಾಮಗಳು ಮತ್ತು ದುಷ್ಪರಿಣಾಮಗಳು :

ಡಾ. ಸಿ.ಆರ್. ಚಂದ್ರಶೇಖರ್

(ಕಳೆದ ಸಂಚಿಕೆಯಿಂದ ಮುಂದುವರೆದ ಭಾಗ)

ಸಿರ್‍ಹೋಸಿಸ್ – ಲಿವರ್ ನಾರುಗಟ್ಟುವಿಕೆ

ದೀರ್ಘಕಾಲ ಆಲ್ಕೋಹಾಲ್ ಸೇವಿಸುವವರಲ್ಲಿ ಶೇಕಡಾ 50 ರಿಂದ 10%ರಷ್ಟು ಮಂದಿ ಸಿರ್‍ಹೋಸಿಸ್ ಕಾಯಿಲೆಗೆ ತುತ್ತಾಗುತ್ತಾರೆ. ವ್ಯಕ್ತಿಗೆ ಸುಮಾರು ಐವತ್ತು ವರ್ಷ ವಯಸ್ಸಾಗಿರುತ್ತದೆ. ಲಿವರ್ ಸಣ್ಣದಾಗಿ ಕಲ್ಲಿನಂತಾಗುತ್ತದೆ. ಜಾಂಡೀಸ್, ಸಣ್ಣ ಪ್ರಮಾಣದ ಜ್ವರ ಕಾಣಿಸಿಕೊಳ್ಳುತ್ತವೆ. ಲಿವರ್ ಹಾನಿ ಹಿಮ್ಮುಖವಾಗುವುದಿಲ್ಲ ಲಿವರ್ ಸೋಲತೊಡಗುತ್ತದೆ. ವ್ಯಕ್ತಿ ಮೃತ್ಯುಮುಖಿಯಾಗುತ್ತಾನೆ. ಅನೇಕ ವಿಷಮ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಎಷ್ಟು ಆಲ್ಕೋಹಾಲ್ ಸೇವಿಸಿದರೆ, ಎಷ್ಟು ಕಾಲ ಸೇವಿಸಿದರೆ ಲಿವರ್ ಹಾನಿಯುಂಟಾಗುತ್ತದೆ. ಎಂದು ಹೇಳಲಾಗುವುದಿಲ್ಲ. ಕೆಲವರಲ್ಲಿ ಲಿವರ್ ಸೂಕ್ಷ್ಮ ಸಂವೇದಿಯಾಗಿದ್ದು, ಸ್ವಲ್ಪ ಕಾಲ ಆಲ್ಕೋಹಾಲ್ ಸೇವಿಸಿದರೇ ಹಾನಿಯೊಳಗಾಗಬಹುದು. ಲಿವರ್ ಹಾನಿಯ ಪ್ರಮಾಣ ಮತ್ತು ರೋಗ ಲಕ್ಷಣ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ.

ಆಲ್ಕೋಹಾಲ್ ಮತ್ತು ಅಪೌಷ್ಟಿಕತೆ

ಆಲ್ಕೋಹಾಲ್ ಪಿಷ್ಟ ಪದಾರ್ಥಗಳಿಂದ, ಸಕ್ಕರೆಯಿಂದ ತಯಾರಾಗುವುದರಿಂದ ಅದು ನಮಗೆ ಕೇವಲ ಶಕ್ತಿ ಕ್ಯಾಲೋರಿಗಳನ್ನು ಕೊಡುತ್ತದೆ. ಅದರಲ್ಲಿ ಪ್ರೋಟೀನ್, ವಿಟಮಿನ್‌ಗಳು ಇಲ್ಲ. ಜೊತೆಗೆ ಮದ್ಯಪಾನಿ ಸರಿಯಾಗಿ ಆಹಾರ ಸೇವಿಸುವುದಿಲ್ಲ. ಅವನು ಸೇವಿಸುವ ಆಹಾರದಲ್ಲಿರುವ ಪೌಷ್ಟಿಕಾಂಶಗಳು ಜಠರ, ಕರುಳಿನ ದ್ವಾರದೊಳಕ್ಕೆ ಹೀರಲ್ಪಡುವುದಿಲ್ಲ. ಆದ್ದರಿಂದ ದೀರ್ಘಕಾಲ ಮದ್ಯ ಸೇವಿಸುವವರು ಬಹುತೇಕ ಪ್ರಕರಣಗಳಲ್ಲಿ ಕಬ್ಬಿಣಾಂಶ ಬಿ1, ಬಿ6, ಬಿ12, ಫೋಲಿಕ್ ಆಸಿಟ್, ಪ್ರೋಟೀನ್ ಕೊರತೆಯಿಂದ ನರಳುತ್ತಾರೆ, ಅನೀಮಿಯಾ (ರಕ್ತಕೊರೆ) ಬಹು ಸಾಮಾನ್ಯ

ಪ್ಯಾಂಕ್ರಿಯಾಸ್ – ಮೇದೋಜೀರಕಾಂಗದ ಉರಿತ

ಹೊಟ್ಟೆಯ ಮೇಲ್ಭಾಗದಲ್ಲಿ ಅವಧಿಗೊಂದಾವರ್ತಿ ಬರುವ ನೋವು ಅಲ್ಲಿಂದ ಬೆನ್ನಿಗೆ ಸಾಗುತ್ತದೆ. ವ್ಯಕ್ತಿ ಮುಂಭಾಗಕ್ಕೆ ಬಗ್ಗಿದರೆ ನೋವು ತಗ್ಗುತ್ತದೆ. ಜೊತೆಗೆ ಜ್ವರ ಅಧಿಕ ರಕ್ತದೊತ್ತಡ ಸ್ವಲ್ಪ ಜಾಂಡೀಸ್ ಕಾಣಿಸಿಕೊಳ್ಳುತ್ತದೆ. ಪ್ಯಾಂಕ್ರಿಯಾಸ್ ಗ್ರಂಥಿಯ ಉರಿಯೂತವೇ ಇದಕ್ಕೆ ಕಾರಣ. ರೋಗಿ ಪ್ರಜ್ಞಾಹೀನ ಸ್ಥಿತಿಗೂ ಹೋಗಬಹುದು.

ಆಲ್ಕೋಹಾಲ್ ಮತ್ತು ಡಯಾಬಿಟೀಸ್

ದೇಹ ಪ್ರತಿಯೊಂದು ಅಂಗ–ಜೀವಕೋಶಕ್ಕೂ ಗ್ಲೂಕೋಸ್ ಬೇಕು. ಆಹಾರದಿಂದ ಲಿವರ್‌ನಲ್ಲಿ ಗ್ಲೈಕೋಜನ್ ಸಂಗ್ರಹದಿಂದ ಗ್ಲೂಕೋಸ್ ದೇಹಕ್ಕೆ ಸಿಗುತ್ತದೆ. ದೀರ್ಘಕಾಲ ಆಲ್ಕೋಹಾಲ್ ಸೇವಿಸುವವರಲ್ಲಿ ಗ್ಲೂಕೋಸ್ ಕೊರತೆಯುಂಟಾಗುತ್ತದೆ. ಅವರು ಆಹಾರವನ್ನು ಸರಿಯಾಗಿ ಸೇವಿಸುವುದಿಲ್ಲ. ಲಿವರ್‌ನಲ್ಲಿ ಗ್ಲೈಕೋಜನ್ ಸಂಗ್ರಹವೂ ಕಡಿಮೆ



ಭಾರತೀಯ ಸೈನ್ಯ ದಿನ

ಜನವರಿ 15, 1948 : ಪ್ರಪ್ರಥಮ ಭಾರತೀಯ ಸೈನ್ಯ ದಿನವನ್ನು ಆಚರಿಸಲಾಯಿತು. ಪ್ರತೀ ವರ್ಷ ಈ ದಿನವನ್ನು ಭಾರತೀಯ ಸೈನ್ಯದ ಪ್ರಥಮ ದಂಡನಾಯಕ ಕನ್ನಡಿಗ ಕೆ.ಎಂ. ಕಾರ್ಯಪ್ಪ ಅವರ ನೆನಪಿಗಾಗಿ ಆಚರಿಸಲಾಗುತ್ತದೆ. ಈ ದಿನ ಅವರು ಸೈನ್ಯದ ಪ್ರಧಾನ ದಂಡನಾಯಕನಾಗಿ ನೇಮಕವಾದರು.

ಇರುತ್ತದೆ. ದೇಹದಲ್ಲಿ ಗ್ಲೂಕೋಸ್ ಉತ್ಪಾದನೆಯೂ ತಗ್ಗುತ್ತದೆ. ಹೀಗಾಗಿ ರಕ್ತದಲ್ಲಿ ಗ್ಲೂಕೋಸ್ ಪ್ರಮಾಣ ಕುಸಿಯುತ್ತದೆ.

(Hypoglycemia)

ಆದ್ದರಿಂದ ಸಿಹಿಮೂತ್ರ ರೋಗಿಗಳು ಆಲ್ಕೋಹಾಲ್ ಕುಡಿಯುವುದು ಅಪಾಯಕಾರಿ. ಔಷಧಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ರಕ್ತದಲ್ಲಿ ಗ್ಲೂಕೋಸ್ ಪ್ರಮಾಣ ಸ್ಥಿರವಾಗಿರುವುದಿಲ್ಲ. ಹೈಪೋಗ್ಲೇಸೀಮಿಯಾ ಆಗಿ, ವ್ಯಕ್ತಿ ಪ್ರಜ್ಞಾಹೀನ ಸ್ಥಿತಿಯನ್ನು ಮುಟ್ಟಬಹುದು. ಸಿಹಿಮೂತ್ರ ರೋಗ ಹತೋಟಿಗೆ ಬರುವುದೇ ಇಲ್ಲ.

ಆಲ್ಕೋಹಾಲ್ ಮತ್ತು ಹೃದಯ ರಕ್ತನಾಳಗಳು

ಇತರರಿಗಿಂತ, ಹೆಚ್ಚು ಆಲ್ಕೋಹಾಲ್ ಸೇವಿಸುವ ಜನರಲ್ಲಿ ಅಧಿಕ ರಕ್ತದೊತ್ತಡ (ಬಿಪಿ ಕಾಯಿಲೆ) ಮತ್ತು ಹೃದ್ರೋಗಗಳು ಕಂಡುಬರುವ ಸಂಭವ ಹೆಚ್ಚು. ಶೇಕಡಾ 50% ರಷ್ಟು ಮದ್ಯಪಾನಿಗಳಿಗೆ ಬಿಪಿ ಹೆಚ್ಚಿರುತ್ತದೆ.

ಹೃದಯದ ಸ್ನಾಯುಗಳು ದುರ್ಬಲಗೊಳ್ಳುತ್ತವೆ. ಇದನ್ನು ಆಲ್ಕೋಹಾಲಿಕ್ ಕಾರ್ಡಿಯೋಮಯೋಪತಿ ಎನ್ನುತ್ತಾರೆ. ಇದು 35 ರಿಂದ 55 ವರ್ಷ ವಯಸ್ಸಿನ ಮದ್ಯಪಾನಿಗಳಲ್ಲಿ ಹೆಚ್ಚು, ಕೆಮ್ಮು, ಉಸಿರಾಟದ ತೊಂದರೆ, ಮೇಲುಸಿರು, ದಣಿವು, ಎದೆ ವೇಗವಾಗಿ ಬಡಿಯುವುದು, ಹಸಿವಿಲ್ಲದಿರುವಿಕೆ, ಹೊಟ್ಟೆಯಲ್ಲಿ ಸಂಕಟ, ಕೈಕಾಲು ಊತ ಸಾಮಾನ್ಯ ರೋಗ ಲಕ್ಷಣಗಳು.

ಆಲ್ಕೋಹಾಲ್ ಮತ್ತು ರೋಗ ನಿರೋಧಕ ಶಕ್ತಿ (Immunity)

ಮದ್ಯಪಾನಿಗಳು ಕ್ರಮೇಣ ರಕ್ತಕೊರೆ, ಕುಗ್ಗಿದ ರೋಗ ನಿರೋಧಕ ಶಕ್ತಿಯಿಂದಾಗಿ ಪದೇ ಪದೇ ಸೋಂಕು ರೋಗಗಳಿಗೆ ತುತ್ತಾಗುತ್ತಾರೆ. ಗಂಟಲ ಸೋಂಕು, ಚರ್ಮದ ಕೀವು ಗಾಯಗಳು, ನ್ಯುಮೇನಿಯಾ, ಕ್ಷಯರೋಗಗಳು ಮದ್ಯಪಾನಿಗಳಲ್ಲಿ ಹೆಚ್ಚು.

ಆಲ್ಕೋಹಾಲ್ ಮತ್ತು ಲೈಂಗಿಕ ದುರ್ಬಲತೆಗಳು

ಆಲ್ಕೋಹಾಲ್ ನೇರವಾಗಿ ಮಿದುಳು ಮತ್ತು ವೃಷಣಗಳ ಮೇಲೆ ದುಷ್ಪರಿಣಾಮ ಬೀರಿ, ಗಂಡಸರ ಗಂಡಸ್ತನವನ್ನು ತಗ್ಗಿಸುತ್ತದೆ. ಷಂಡತನ, ಬಂಜೆತನ, ಎದೆ ಭಾಗ ಉಬ್ಬುವುದು ((ಗೈನೋಕೋಮೇಸ್ಟಿಯ), ಮೀಸೆ ಗಡ್ಡಗಳು ಉದುರಿಹೋಗುವುದು ಕಾಣಿಸಿಕೊಳ್ಳುತ್ತವೆ. ಹೀಗಾಗಿ ವ್ಯಕ್ತಿಯ ಲೈಂಗಿಕ ಚಟುವಟಿಕೆ ಸುಖದಾಯಕವಾಗಿರುವುದಿಲ್ಲ. ಜೊತೆಗೆ ಹೆಂಡತಿಯೊಂದಿಗೆ ಜಗಳ, ವಿರಸ, ಮನಸ್ತಾಪಗಳು. ದಾಂಪತ್ಯ ಜೀವನ ಅಸ್ತವ್ಯಸ್ತಗೊಳ್ಳುತ್ತದೆ. ವಿಚ್ಛೇದನಕ್ಕಾಗಿ ಕುಟುಂಬ ನ್ಯಾಯಾಲಯಗಳಿಗೆ ಬರುವ ಅನೇಕ ಪ್ರಕರಣಗಳಲ್ಲಿ ಗಂಡನ ಆಲ್ಕೋಹಾಲ್ ಚಟದ ಸಮಸ್ಯೆ ಇದಕ್ಕೆ ಪ್ರೇರಕವಾಗಿರುತ್ತದೆ.

> ವಿಶ್ವದ ದೊಡ್ಡ ಶಕ್ತಿಗಳೆಂದರೆ ಅಣುಶಕ್ತಿ ಮತ್ತು ಆತ್ಮಶಕ್ತಿ. ಆತ್ಮವು ಶಾಂತಿ ಮತ್ತು ಕ್ರಾಂತಿಗಳ ಮಹಾ ಸರಿಗಮ ಎಂದು ಗಾಂಧೀಜಿ ಹೇಳುತ್ತಾರೆ. ಸಾಧು, ಸಂತರ ಒಡನಾಟ, ಉತ್ತಮ ಮೌಲ್ಯಗಳ ಮೂಲಕ ಆತ್ಮವು ಪರಿಪಕ್ವ ಫಲವಾಗುವತ್ತ ನಾವು ಕಾರ್ಯ ನಿರ್ವಹಿಸಬೇಕು.
>
> - ಶಂಕರ ಉತ್ತೂರ, ಸರ್ವೋದಯ ಕಾರ್ಯಕರ್ತ

ಮೂಳೆಗಳು ಮುರಿಯುವುದು

ಮದ್ಯಪಾನಿಗಳ ಮೂಳೆಗಳು ಬಹುಬೇಗ ಸವೆಯುತ್ತವೆ. (ಆಸ್ಟಿಯೋ ಪೊರೋಸಿಸ್) ಬಿದ್ದು, ಹೊಡೆದಾಡಿ ಆಕ್ಸಿಡೆಂಟ್‌ಗಳಾಗಿ ಅಥವಾ ಚಲನೆ ಮಾತ್ರದಿಂದಲೇ ಮೂಳೆಗಳು ಮುರಿಯುತ್ತವೆ.

ಆಲ್ಕೋಹಾಲ್ ಮತ್ತು ಏಡ್ಸ್

ಮದ್ಯಪಾನ ಮಾಡಿ, ವಿವೇಚನೆ ಇಲ್ಲದೆ, ಅಪರಿಚಿತರ ಜೊತೆ, ವೇಶ್ಯೆಯರ ಜೊತೆ ಲೈಂಗಿಕ ಸಂಪರ್ಕ ಮಾಡುವ ಸಾಧ್ಯತೆ ಮದ್ಯಪಾನಿಗಳಲ್ಲಿ ಹೆಚ್ಚು. ಹೀಗಾಗಿ ಲೈಂಗಿಕ ರೋಗಗಳು ಹಾಗೂ ಏಡ್ಸ್ ಇವರಲ್ಲಿ ಕಂಡುಬರುವುದು ಹೆಚ್ಚು.

ಆಲ್ಕೋಹಾಲ್ ಮತ್ತು ಮಿದುಳು

ಆಲ್ಕೋಹಾಲ್ ನರಕೋಶಗಳ ಚಟುವಟಿಕೆಗೆ ಕಾರ್ಯಶೀಲತೆಯನ್ನು ಕುಗ್ಗಿಸುವುದಲ್ಲದೆ, ಅವುಗಳನ್ನು ದೀರ್ಘಾವದಿಯಲ್ಲಿ ನಾಶಗೊಳಿಸುತ್ತದೆ. ಇದರಿಂದಾಗಿ, ಮದ್ಯಪಾನಿಯ ಕಲಿಕೆ, ಏಕಾಗ್ರತೆ, ನೆನಪು, ಚಿಂತನೆ, ವಿಶ್ಲೇಷಣೆ, ನಿರ್ಧಾರ ಮಾಡುವ ಶಕ್ತಿ, ಬುದ್ಧಿ ಸಾಮರ್ಥ್ಯ, ಭಾವನೆಗಳನ್ನು ಹತೋಟಿಯಲ್ಲಿಡುವ ಶಕ್ತಿ ಕುಗ್ಗುತ್ತದೆ. ಖಿನ್ನತೆ, ಆತಂಕ, ನಡುಕಸನ್ನಿ, ಚಿತ್ತ ವಿಕಲತೆ, ಮತಿಹೀನ ಸ್ಥಿತಿಯಂತಹ ಮಾನಸಿಕ ಕಾಯಿಲೆಗಳು, ಫಿಟ್ಸ್ ಪಾರ್ಶ್ವವಾಯು, ಪರಿಧಿಯ ನರಬೇನೆಯಂತಹ ನರಸಂಬಂದಿ ರೋಗಗಳು ಮದ್ಯಪಾನಿಗಳಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ.

ಮುಂದುವರೆಯುವುದು......


(ಮದ್ಯಪಾನ ಸಂಯಮ ಮಂಡಳಿಯು ಪ್ರಕಟಿಸಿದ ಮದ್ಯಪಾನ ಆರೋಗ್ಯಕ್ಕೆ ಮಾರಕ ಹೇಗೆ? ಪರಿಹಾರ ಹೇಗೆ? ಕೃತಿಯಿಂದ ಆಯ್ದ ಭಾಗ)



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರೆದ ಭಾಗ)



ಸ್ವರ್ಣಕುಮಾರಿ ದೇವಿ : (1855–1932)

ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯೇ ಇಲ್ಲವೆಂಬ ಪ್ರತೀತಿಗಳಿಗೆ ಸ್ವರ್ಣಕುಮಾರಿ ದೇವಿ ತಿಲಾಂಜಲಿ ಹಾಡಿದವರಾಗಿದ್ದಾರೆ. ಅಂದು ಏಕೈಕ ರಾಜಕೀಯ ಪಕ್ಷವಾಗಿದ್ದ ಕಾಂಗ್ರೆಸ್ ಮಹಿಳೆಯರ ಸದಸ್ಯತ್ವಕ್ಕೆ ಉತ್ತೇಜನ ನೀಡುತ್ತಿತ್ತು. ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸಿದ ಎ.ಓ. ಹ್ಯೂಮ್ ಅವರು, "ಮಹಿಳೆಯರ ಕಾರ್ಯಗಳಿಂದ, ಶ್ರಮದಿಂದ ಅವರ ಅಭ್ಯುದಯವನ್ನು ಪರಿಗಣಿಸಲ್ಪಡದಿದ್ದರೆ, ದೇಶದ ರಾಜಕೀಯ ಪ್ರಗತಿ ಕುಂಠಿತವಾದಂತಾಗುವುದು" ಎಂದು ಕರೆ ನೀಡಿದರು. 1889ರಲ್ಲಿ ನಡೆದ ಕಾಂಗ್ರೆಸ್‌ನ 4ನೇ ಅಧಿವೇಶನದಲ್ಲಿ ಸ್ವರ್ಣಕುಮಾರಿ ಅವರು ಭಾಗವಹಿಸಿದರು. ಆಕೆ ಕವಿ, ಕಾದಂಬರಿಗಾರ್ತಿಯಾಗಿ, ಗಾಯನ ಕಲಾವಿದೆಯಾಗಿ ಹೆಸರು ಪಡೆದಿದ್ದರು. ಅದಾಗಲೇ, ಆಕೆ, ಪರ್ದಾಪದ್ಧತಿಯ ವಿರುದ್ಧ ಹೋರಾಟವನ್ನು ಪ್ರಾರಂಭಿಸಿದ್ದರು ಮತ್ತು 'ಭಾರತಿ' ಎಂಬ ಬಂಗಾಲಿ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. 'ಶಕ್ತಿ ಸಮಿತಿ' ಎಂಬ ಮಹಿಳಾ ಸಂಸ್ಥೆಯನ್ನು 1886ರಿಂದ ನಡೆಸುತ್ತಾ ಮಹಿಳಾ ಸಬಲೀಕರಣದ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಆಕೆ ಭಾರತದ ಮತ್ತು ಬಂಗಾಲದ ಪ್ರಥಮ ಮಹಿಳಾ ಸಂಪಾದಕಿಯಾಗಿ ಕೀರ್ತಿಗೆ ಭಾಜನರಾಗಿದ್ದಾರೆ.



ಕಾದಂಬಿನಿ ಗಂಗೂಲಿ : (1862–1923)

ಬಂಗಾಲದ ಪ್ರಥಮ ವೈದ್ಯೆಯೆಂದು ಹೆಸರು ಗಳಿಸಿದ ಕಾದಂಬಿನಿ ಅವರು, ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಪದವಿಗಳಿಸಿ ಹೊರಬಂದ ಮೊದಲ ಹೆಣ್ಣು ಮಗಳಾಗಿದ್ದಳು. ಕಾಂಗ್ರೆಸ್‌ನ 5ನೇ ಅಧಿವೇಶನಕ್ಕೆ ಆಗಮಿಸುವುದರ ಮುಖಾಂತರ, ಮಹಿಳೆಯರ ರಾಜಕೀಯ ಪ್ರವೇಶಕ್ಕೆ ನಾಂದಿ ಹಾಡಿದವರೂ ಇವರಾಗಿದ್ದಾರೆ. ಬಿಟಿಷ್ ಸರ್ಕಾರದ ಬಂಗಾಲ ವಿಭಜನೆಯನ್ನು ಇವರು ತೀವ್ರವಾಗಿ ವಿರೋಧಿಸಿದ್ದವರು. ಈ ರಾಜಕೀಯ ಶಕ್ತಿಯಿಂದ ಪ್ರೇರಣೆಗೊಂಡ ಆಕೆ ಮಹಿಳೆಯರ ಸಂಘಟನೆಗೆ ತೊಡಗಿಕೊಂಡರು ಮತ್ತು 1906ರಲ್ಲಿ ಕಲ್ಕತ್ತಾದಲ್ಲಿ ಮಹಿಳಾ ಸಮಾವೇಶವನ್ನು ಆಯೋಜಿಸಿದರು.



ಸರಳಾದೇವಿ ಚೌಧುರಾಣಿ: (1872–1945)

ಬಂಗಾಲದ ವಿಭಜನೆಯ ಪ್ರಸ್ತಾಪವು 1905ರಲ್ಲಿ ಪ್ರಕಟಗೊಂಡ ಸಂದರ್ಭವೇ, ಬಂಗಾಲ ಪ್ರದೇಶದಲ್ಲಿ ಸ್ವದೇಶಿ ಚಳುವಳಿಗೆ ಪ್ರಮುಖ ಕಾರಣವಾಯಿತೆನ್ನಬಹುದು. ಆ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ ಸರಳಾದೇವಿ ಚೌಧುರಾಣಿ ಅವರೂ ಪ್ರಮುಖರಾಗಿದ್ದಾರೆ. ಇವರು ರವೀಂದ್ರನಾಥ ಠಾಕೂರ್ ಅವರ ಸಂಬಂಧಿಯೂ ಆಗಿದ್ದರು. ಮತ್ತು ಇವರ ತಾಯಿ ಸ್ವರ್ಣಕುಮಾರಿ ದೇವಿ ಅವರು ಸ್ವಾತಂತ್ರ ಹೋರಾಟದಲ್ಲಿ ಸಕ್ರಿಯರಾದವರಾಗಿದ್ದರು. ಸರಳಾದೇವಿ ಅವರು ಕಾಂಗ್ರೆಸ್‌ನ 17ನೇ ಅಧಿವೇಶನದಲ್ಲಿ ತಾನೇ ರಚಿಸಿದ "ಭಾರತೀಯರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲು ಕರೆ ನೀಡುವಂತಹ" ಕವನವನ್ನು 50 ಮಂದಿ ಗಾಯಕರ ತಂಡದೊಂದಿಗೆ ಹಾಡಿದ್ದಳು. ತಿಲಕರು ಆಯೋಜಿಸಿದ ಗಣಪತಿ ಹಬ್ಬಗಳಲ್ಲಿ ಭಾಗಿಯಾಗಿ ಸ್ಫೂರ್ತಿಯನ್ನು ಪಡೆದಿದ್ದಾಳು. ಈಕೆ ಕಲ್ಕತ್ತಾದಲ್ಲಿ 'ಅಕ್ರಾಸ್' ಮತ್ತು 'ಬಹಾಮ್ ಸಮಿತಿ'ಗಳನ್ನು ಸ್ಥಾಪಿಸಿ, ಯುವಜನರು ಸಶಕ್ತರಾಗಲು ತರಬೇತಿಯನ್ನು ಕೊಡಲಾರಂಭಿಸಿದ್ದಳು. ನಂತರ 'ಸುಹರಿದ್ ಸಮಿತಿ'ಗಳನ್ನು ರಚಿಸಿ, ಯುವಜನರು ಧಾರ್ಮಿಕ ಆಚರಣೆಗಳೊಂದಿಗೆ ಶೌರ್ಯ ಶಕ್ತಿ ಪಡೆಯಲು ಉತ್ತೇಜನ ನೀಡಿದರು. ಸ್ವಂತ ಬಂಡವಾಳದೊಂದಿಗೆ ಮಹಿಳೆಯರಿಗಾಗಿ 'ಲಕ್ಷ್ಮಿ ಭಂಡಾರ'ವೆಂಬ ಅಂಗಡಿಯೊಂದನ್ನು ತೆರೆಯಲು ಹೆಣ್ಣುಮಕ್ಕಳ ಅಗತ್ಯಗಳನ್ನು ಪೂರೈಸುವ ಮತ್ತು ಸಬಲೀಕರಣದ ಪಾತಕ್ಕೆ ಬೆಂಬಲವಾದರು. ಇದರೊಂದಿಗೆ "ಭಾರತ ಸ್ತ್ರೀ ಮಂಡಲ"ವೆಂಬ ಅಖಿಲ ಭಾರತ ಮಟ್ಟದ ಮಹಿಳಾ ಸಂಸೆಯನ್ನು ಕಟ್ಟಿದ್ದರು. ರಾಷ್ಟ್ರೀಯವಾದಿಯಾದ ಇವರು ಮಹಿಳಾ ಸಬಲೀಕರಣದೊಂದಿಗೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸಿಕೊಂಡಿದ್ದರು.

ನವ ಭಾರತ ನಿರ್ಮಾಪಕರು

– ಬಿ.ಎನ್. ಹೇಮಾದೇವಿ

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

(ಶಾಂತಾದೇವಿ ಮಾಳವಾಡರ ಕಿರುಪರಿಚಯದ ಮುಂದುವರಿದ ಭಾಗ)

ಕರ್ನಾಟಕದ ಹೆಮ್ಮೆಯ ಮಹಿಳಾ ಮಣಿಗಳನ್ನು ಸಮಾಜಕ್ಕೆ ಪರಿಚಯಿಸಿದ ಕೀರ್ತಿ ಶಾಂತಾದೇವಿ ಅವರಿಗೆ ಸಲ್ಲುತ್ತದೆ. ಅತ್ತಿಮಬ್ಬೆ, ಬೆಳವಡಿ ಮಲ್ಲಮ್ಮ, ಕಂತಿ, ಸಂಚಿ ಹೊನ್ನಮ್ಮ, ಅಕ್ಕಮಹಾದೇವಿ, ಅಕ್ಕನಾಗಮ್ಮ ಇವರ ಜೀವನ ಚರಿತ್ರೆಗಳನ್ನು ಬರೆದರು. ವಚನಗಾರ್ತಿಯರನ್ನು ಕುರಿತು ಸಣ್ಣ ಕತೆಗಳನ್ನೂ ಅವರು ಬರೆದರು. ಕುಂಕುಮಬಲ, ಹರಿಹರನ ಪ್ರಾರ್ಥನೆ, ಕನ್ನಡತಾಯಿ, ನಂದಾದೀಪ ಹಾಗೂ ಶ್ರೀಗಿರಿಯಿಂದ ಹಿಮಗಿರಿಗೆ ಎಂಬ ಕೃತಿಗಳನ್ನು ರಚಿಸಿದ್ದರು. ಅವರು ತಮ್ಮ 'ಕನ್ನಡ ತಾಯಿ' ಕೃತಿಯಲ್ಲಿ ಕನ್ನಡ ನಾಡು, ನುಡಿಗೆ ಸಂಬಂಧಿಸಿದಂತೆ ಕನ್ನಡ ತಾಯಂದಿರ ಜೀವನ ಚಿತ್ರಣ ನೀಡಿದ್ದಾರೆ. ಮಹಿಳೆಯರಿಗೆ ಸಂಬಂಧಿಸಿದಂತೆ ಹಲವಾರು ವಿಚಾರಗಳಲ್ಲಿ ಅಂದರೆ 'ರಸಪಾಕ', 'ಮಹಿಳೆಯರ ಅಲಂಕಾರ' ಎಂಬ ಸಂಶೋಧನ ಕೃತಿ, 'ಸೊಬಗಿನ ಮನೆ', 'ವಧುವಿಗೆ ಉಡುಗೊರೆ', 'ಕುಟುಂಬ' ಇತ್ಯಾದಿ ಹಲವಾರು ಉಪಯುಕ್ತ ಕೃತಿಗಳನ್ನೂ ರಚಿಸಿದರು. ಇವುಗಳಲ್ಲಿ ಬಹಳಷ್ಟು ಕೃತಿಗಳು ಮರುಮುದ್ರಣ ಕಂಡಿವೆ. 'ಸಮುಚ್ಚಯ', 'ಮಹಿಳಾ ಚೇತನ', 'ಸಾರ್ವಜನಿಕ ರಂಗದಲ್ಲಿ ಮಹಿಳೆ' ಅವರ ವಿಮರ್ಶಾ ಕೃತಿಗಳು. ಪತಿ ಮಾಳವಾಡರು ಆರಂಭಿಸಿದ್ದ ಆತ್ಮ ಚರಿತ್ರೆ 'ದಾರಿ ಸಾಗಿದೆ' ಎಂಬ ಕೃತಿಯ ಕೊನೆ ಭಾಗವನ್ನು ಇವರು ಪೂರ್ಣಗೊಳಿಸಿದರು. ಎಳೆಯ ಮಕ್ಕಳಿಗಾಗಿ 'ನಾಗಲಾಂಬಿಕೆ', 'ಕೆಳದಿ ಚೆನ್ನಮ್ಮ', 'ಬೆಳವಾಡಿ ಮಲ್ಲಮ್ಮ', 'ನೀಲಾಂಬಿಕೆ', 'ಕುಟುಂಬ' ಎಂಬ ಐದು ಪುಸ್ತಕಗಳನ್ನು ರಚಿಸಿದರು. ಕಾದಂಬರಿ, ನಾಟಕ, ಲಲಿತ ಪ್ರಬಂಧಗಳು ಹೀಗೆ ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ಅವರು ಬರೆದರು. 1998ರಲ್ಲಿ ಪ್ರಕಟಗೊಂಡ 'ಶೂರರಾಣಿ ಕೆಳದಿಯ ಚೆನ್ನಮ್ಮಾಜಿ' ಶಾಂತಾದೇವಿ ಅವರ ಅಪೂರ್ವ ಸಂಶೋಧನಾ ಕೃತಿಯಾಗಿದೆ ಅವರ 'ಕನ್ನಡ ತಾಯಿ' ಯಂತಹ ಕೆಲವು ಪುಸ್ತಕಗಳು ಪಠ್ಯಪುಸ್ತಕಗಳಾಗಿ ಮಾನ್ಯತೆ ಪಡೆದಿವೆ.

ಅವರು 1973ರಿಂದ 1978ರವರೆಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸದಸ್ಯೆಯಾಗಿದ್ದರು. 1979ರಲ್ಲಿ ಸಾಹಿತ್ಯ ಅಕಾಡೆಮಿ ಸದಸ್ಯೆಯಾಗಿದ್ದರು. ಶಾಂತಾದೇವಿ ಮಾಳವಾಡರಿಗೆ ಹಲವು ಪ್ರಶಸ್ತಿಗಳೂ ಗೌರವಗಳು ಸಂದಿವೆ. 1977ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ, 1994ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ, 1997ರಲ್ಲಿ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, 1999ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಹಿರಿಯ ಗೌರವಗಳು ಅರಸಿ ಬಂದಿವೆ. ರಾಜ್ಯ ಸಾಹಿತ್ಯ ಅಕಾಡಮಿ, ರಾಜ್ಯೋತ್ಸವ ಪ್ರಶಸ್ತಿ, ಸಾವಿತ್ರಮ್ಮ ದೇ.ಜ.ಗೌ. ಪ್ರಶಸ್ತಿ, ಅನುಪಮ ಪ್ರಶಸ್ತಿ, ಲಿಪಿ ಪ್ರಾಜ್ಞೆ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ಎಂ.ಕೆ. ಇಂದಿರಾ ಪ್ರಶಸ್ತಿ ಮುಂತಾದ ಪ್ರತಿಷ್ಠಿತ ಪ್ರಶಸ್ತಿಗಳು ಇವರಿಗೆ ಪ್ರಧಾನ ಮಾಡಲಾಗಿದೆ.

ಇಡೀ ಜೀವನವನ್ನು ಜನಹಿತ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದ ಶಾಂತಾದೇವಿ ಮಾಳವಾಡರು ಆಗಸ್ಟ್ 7, 2005ರಂದು ಇಹ ಜೀವನಕ್ಕೆ ವಿದಾಯ ಹೇಳಿದರು. ಶೈಕ್ಷಣಿಕವಾಗಿ ಪ್ರಾಥಮಿಕ ಶಾಲೆಯವರೆಗೆ ವಿದ್ಯಾಭ್ಯಾಸ ಪಡೆದಿದ್ದರೂ, ಅವರ ನಿರಂತರ ಓದುವಿಕೆ ಅವರನ್ನು ಶ್ರೇಷ್ಠ ಚಿಂತಕಳು, ತಜ್ಞಳನ್ನಾಗಿಸಿತು. ಆದ್ದರಿಂದಲೇ ಅವರು ಸಾಹಿತ್ಯ, ಸಾಮಾಜಿಕ ಕ್ಷೇತ್ರದಲ್ಲಿ ಕತೆ, ಕಾದಂಬರಿ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ, ವಿಚಾರ ಸಾಹಿತ್ಯ, ವಿಮರ್ಶೆ ಹೀಗೆ ಎಲ್ಲ ಪ್ರಕಾರಗಳಲ್ಲಿ ಮಹತ್ತರವಾದ ಸಾಧನೆಯನ್ನು ಮಾಡಲು ಸಾಧ್ಯವಾಯಿತು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಅಖಿಲ ಭಾರತ ಅಕ್ಕನ ಬಳಗ, ಧಾರವಾಡದ ರಿಮ್ಯಾಂಡ್ ಹೋಂ, ಮುಂತಾದ ಸಂಸ್ಥೆಗಳ, ಸಮಿತಿಯ ಸದಸ್ಯರಾಗಿ ಧಾರವಾಡದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಮಹಿಳಾ ಗೋಷ್ಠಿಯ ಸ್ವಾಗತಾಧ್ಯಕ್ಷೆ, ಅಖಿಲ ಭಾರತದ ವೀರಶೈವ ಮಹಾಸಭಾ ಮಹಿಳಾ ಗೋಷ್ಠಿಯ ಸ್ವಾಗತಾಧ್ಯಕ್ಷೆ. ಅಖಿಲಭಾರತ ಅಕ್ಕನ ಬಳಗದ ಸಮ್ಮೇಳನಾಧ್ಯಕ್ಷೆ, ಕರ್ನಾಟಕ ಲೇಖಕಿಯರ ಸಮ್ಮೇಳನ, ಶರಣ ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ ಭಾಗಿಯಾಗಿ 68ನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ಹೀಗೆ ಶಾಂತಾದೇವಿ ಮಾಳವಾಡರು ಕರ್ನಾಟಕದ ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ವಲಯದಲ್ಲಿ ವಿಶಿಷ್ಟ ಸ್ಥಾನ ಗಳಿಸಿದ್ದಾರೆ.

(ಆಧಾರ : ಶ್ರೀಮತಿ ಹೇಮಾ ಪಟ್ಟಣಶೆಟ್ಟಿ ಅವರ ಶಾಂತಾದೇವಿ ಮಾಳವಾಡ ಕೃತಿ)



ಆಯ್ಕೆಯ ಬಡತನ ಅಥವಾ ಸರಳ ಜೀವನ

– ಡಾ. ಎನ್. ಜಗದೀಶ್ ಕೊಪ್ಪ

(ಗಾಂಧೀಜಿ ಅವರ ಸ್ವಗತ ಕೃತಿಯಿಂದ)

ಆತ್ಮೀಯರೆ, ನೀವು ನನ್ನಿಂದ ಇಂತಹ ವಿಷಯಗಳನ್ನು ಕೇಳುವಾಗ ಆಶ್ಚರ್ಯಪಡುತ್ತೀರಿ. ಆದರೆ, ಇವೆಲ್ಲವೂ ನನ್ನ ರಾಜಕೀಯ ಜೀವನದಲ್ಲಿ ಅಡಕವಾಗಿರುವ ವಿಷಯಗಳೇ ಆಗಿವೆ. ಇಲ್ಲಿ ನಾನು ನೀಡುವ ಭರವಸೆಗಳನ್ನು ನೀವು ಸ್ವೀಕರಿಸಬೇಕೇಂದು ಬಯಸುತ್ತೇನೆ. ಏಕೆಂದರೆ, ಅವೆಲ್ಲವೂ ನನ್ನ ಬದುಕಿನ ಆಧ್ಯಾತ್ಮದ ಬೇರುಗಳಾಗಿವೆ ಎಂದರೆ ಬಹುಶಃ ನಂಬರಾರಿರಿ. ಆದರೆ, ನನ್ನ ರಾಜಕೀಯ ಜೀವನವು ಆಧ್ಯಾತ್ಮದಿಂದ, ನೈತಿಕತೆಯಿಂದ ಮತ್ತು ಧರ್ಮದಿಂದ ಬೇರ್ಪಡಿಸಲಾಗದಂತಹದ್ದು ಎಂದು ನಿಮಗೆ ತಿಳಿಸಬಯಸುತ್ತೇನೆ. ಇವೆಲ್ಲವೂ ನನ್ನ ಬದುಕಿನಲ್ಲಿ ನಾನು ನಡೆಸಿದ ನಿರಂತರ ಪ್ರಯೋಗದಿಂದ ನಾನು ಕಂಡುಕೊಂಡ ಸತ್ಯಗಳು ಎಂದು ಹೇಳಬಲ್ಲೆ. ವ್ಯಕ್ತಿಯೊಬ್ಬ ದೇವರನ್ನು ಅರಸುತ್ತಾ, ಸತ್ಯದ ಮಾರ್ಗದಲ್ಲಿ ನಡೆಯುವಾಗ ಅವನು ಜೀವನದ ಯಾವುದೇ ಕ್ಷೇತ್ರವನ್ನು ಸ್ಪರ್ಶಿಸದೆ ಇರಲಾರ. ನನ್ನ ಸಾಮಾಜಿಕ ಮತ್ತು ರಾಜಕೀಯ ಸೇವೆಯಲ್ಲಿ ಇದು ನನಗೆ ಅನುಭವವಾಗಿದೆ. ಈ ವಿಷಯದಲ್ಲಿ ಅಂತಿಮವಾಗಿ ಹೇಳುವುದಾದರೆ, ನೈತಿಕತೆ, ಸತ್ಯ, ದೇವರ ಕುರಿತಾದ ಭಯ ಅನಿವಾರ್ಯವಲ್ಲ ಎನ್ನುವಂತಹ ಯಾವುದಾದರೂ ಕ್ಷೇತ್ರಗಳಿದ್ದರೆ ಅವುಗಳನ್ನು ಸಂಪೂರ್ಣವಾಗಿ ತೊರೆಯಬೇಕು ಎಂದು ನಿರ್ಧರಿಸಿರುವ ನಾನು ಈ ನನ್ನ ಸೇವೆಯ ಹಾದಿಯಲ್ಲಿ ಇದೀಗ ನಡೆಯುತ್ತಿದ್ದೇನೆ.

ರಾಜಕೀಯ ಕುರಿತಾಗಿ ಮಾತ್ರ ನಾನು ಮಾತನಾಡುತ್ತಿದ್ದೇನೆ ಎಂದು ತಾವು ಭಾವಿಸಬಾರದು. ನನ್ನ ಅನುಭವದಲ್ಲಿ ಪ್ರಸ್ತುತ ರಾಜಕೀಯವೆಂದರೆ, ಅದು ರಾಜ ಮಹಾರಾಜರ ಕುರಿತ ಕಾಳಜಿಯಲ್ಲ. ಅಂತಹದ್ದು ಬಹುಕಾಲ ಉಳಿಯುವುದಿಲ್ಲ. ಅವರಿಂದಾಗಿ ಸಮಾಜದ ತಳವರ್ಗದ ಸಮುದಾಯಕ್ಕೆ ಅನೇಕ ತೊಂದರೆಯಾಗಿದೆ. ನನ್ನ ಕಹಿ ಅನುಭವದಲ್ಲಿ ಹೇಳುವುದಾದರೆ, ನಾನು ನಿಜವಾದ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕಾದರೆ ನನಗೆ ರಾಜಕೀಯ ಅನಿವಾರ್ಯವಾಗಿದೆ. ಅದನ್ನು ನಿರಾಕರಿಸಿ ಸಮಾಜ ಸೇವೆಯಲ್ಲಿ ಮುಂದುವರಿಯಲು ಸಾಧ್ಯವಿಲ್ಲ ಎಂಬುದನ್ನು ಮನಗಂಡಿದ್ದೇನೆ.

ನಾನು ರಾಜಕೀಯ ಮತ್ತು ಅದಕ್ಕೆ ಹೊಂದಿಕೊಂಡಂತೆ ಸ್ವಯಂ ಬಡತನ ಅಥವಾ ಆಯ್ಕೆಯ ಬಡತನ ಕುರಿತಾಗಿ ನಿಮ್ಮ ಜೊತೆ ಮಾತನಾಡುತ್ತಿರುವುದಕ್ಕೆ ಅನ್ಯತಾ ಭಾವಿಸಬಾರದು. ಅದು ನನ್ನ ಉದ್ದೇಶವಲ್ಲ. ಆದರೆ, ಅದರ ಕುರಿತಾಗಿ ಒಂದು ಸಣ್ಣ ಪರಿಚಯವನ್ನು ಇಲ್ಲಿ ನೀಡುತ್ತಿದ್ದೇನೆ. ಸ್ವಯಂ ಬಡತನ ಅಥವಾ ಆಯ್ಕೆಯ ಬಡತನ ಎಂಬುವುದು ಸಾಮಾಜಿಕ ಇಲ್ಲವೆ ರಾಜಕೀಯ ಕಾರ್ಯಕರ್ತರ ಜೀವನದಲ್ಲಿ ಅನಿವಾರ್ಯ ಎಂಬ ನಿರ್ಧಾರಕ್ಕೆ ನಾನು ಬಂದಿದ್ದೇನೆ. ಆದರೆ, ಇಂದಿನ ಸಾಮಾನ್ಯ ರಾಜಕಾರಣದಲ್ಲಿ ಕೊಳೆತು ನಾರುತ್ತಿರುವ ಸುಳ್ಳು ಮತ್ತು ಅನೈತಿಕತೆಯ ಮೂಲಕ ಯಾರೊಬ್ಬರೂ ಇಲ್ಲಿ ಉಳಿಯಬಾರದು. ಅಂತಹ ಜೀವನದಿಂದ ಬರುವ ದುರ್ವಾಸನೆಯು ಕೆಲವರಿಗೆ ಉಸಿರುಗಟ್ಟಿಸುವಂತೆ ತೋರುತ್ತಿತ್ತು ಜೊತೆಗೆ ರಾಜಕೀಯವು ನೈತಿಕತೆಯ ಭಯ ಇರುವ ಉತ್ತಮ ವ್ಯಕ್ತಿಗಳಿಗೆ ಅಲ್ಲ ಎಂದು ಅನಿಸುತ್ತಿತ್ತು. ಅಕಸ್ಮಾತ್ ಇದು ನಿಜವಾಗಿದ್ದರೆ ಇದು ಮನುಕುಲದ ದುರಂತ ಎಂದು ನಾನು ಭಾವಿಸುತ್ತೇನೆ. ನಾನು ಏನು ಹೇಳುತ್ತಿದ್ದೇನೆ ಎಂಬುದರ ಕುರಿತು ಒಮ್ಮೆ ಆಲೋಚಿಸಿ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಮ್ಮ ದೈನಂದಿನ ಚಟುವಟಿಕೆಯಲ್ಲಿ ರಾಜಕೀಯ ಬೆರೆತು ಹೋಗಿದೆ. ಇಷ್ಟು ಮಾತ್ರವಲ್ಲದೆ, ಈ ಜಗತ್ತಿನ ಯಾವ ಮಹಾನಗರಗಳನ್ನು ಅದು ಸ್ಪರ್ಶಿಸದ ಅಥವಾ ಆಕ್ರಮಿಸಿಕೊಳ್ಳದೆ ಬಿಟ್ಟಿಲ್ಲ.

ನನ್ನ ಸುತ್ತಾ ರಾಜಕೀಯವು ಆವರಿಸಿ ಕೊಂಡಾಗ, ಒಮ್ಮೆ ನಾನು ನನ್ನನ್ನು ಪ್ರಶ್ನಿಸಿಕೊಂಡೆ; ಸುಳ್ಳು ಮತ್ತು ಅನೈತಿಕತೆಯಿಂದ ತಾಂಡವಾಡುತ್ತಿರುವ ಈ ರಾಜಕೀಯದ ಅವಶ್ಯಕತೆ ನನಗೆ ಬೇಕಾ? ಎಂದು. ನನ್ನ ನಿರಂತರ ಹುಡುಕಾಟ ಅಥವಾ ಶೋಧನೆಯ ನಂತರ ನನಗೆ ಅನಿಸಿದ್ದು ಏನೆಂದರೆ, ಕನಿಷ್ಟ ಈ ರಾತ್ರಿ, ನಾನು ಏಕಾಂಗಿಯಾಗಿರಬೇಕು ಜೊತೆಗೆ ನನ್ನ ನಿರ್ಧಾರ ಸರಿಯಾಗಿದ್ದರೆ, ಬಡತನವೆಂಬುದು ಮೊದಲು ನನಗೆ ಬರಲಿ ಎಂಬುದಾಗಿತ್ತು.

ಅಂತಹ ಕಾರ್ಯ ಅಥವಾ ಕಾರ್ಯಕ್ಷಮತೆಯ ಎಲ್ಲಾ ವಿವರಗನ್ನು ನೀವು ಸ್ವೀಕರಿಸಿ ಎಂದು ನಾನು ಸಲಹೆ ನೀಡುತ್ತಿಲ್ಲ. ಆದರೆ, ಅವುಗಳು ನನ್ನ ಪಾಲಿಗೆ ಪವಿತ್ರವಾಗಿದ್ದವು ಎಂದು ಮಾತ್ರ ಹೇಳಬಲ್ಲೆ. ಆರಂಭದಲ್ಲಿ ನನಗೆ ಅದು ಒಂದು ರೀತಿಯಲ್ಲಿ ಕಷ್ಟಕರವಾದ ಹೋರಾಟವಾಗಿತ್ತು. ಈ ಕಾರಣಕ್ಕಾಗಿ ನನ್ನ ಪತ್ನಿಯೊಂದಿಗೆ ಆಗಾಗ್ಗೆ ಜಗಳವೂ ಸಹ ನಡೆಯುತ್ತಿತ್ತು. ಇದನ್ನು ನಾನು ಪದೇ ಪದೇ ನನ್ನ ಮಕ್ಕಳ ಜೊತೆ ನೆನಪು ಮಾಡಿಕೊಳ್ಳುತ್ತೇನೆ. ನಾನು ಇಂತಹ ದೃಢ ನಿರ್ಧಾರಕ್ಕೆ ಬರುವಾಗ ಅತೀವ ಕಷ್ಟವಾಯಿತು. ಈ ನನ್ನ ಮಧ್ಯವಯಸ್ಸಿನಲ್ಲಿ ನಾನು ಜನತೆಯ ಸೇವೆ ಮಾಡಬೇಕಾದರೆ ಸರಳವಾದ ಬದುಕು ಅನಿವಾರ್ಯ ಎಂಬ ತೀರ್ಮಾನಕ್ಕೆ ಬಂದೆ. ನನ್ನ ಈ ಪ್ರಯೋಗದಿಂದ ದಿನದಿಂದ ದಿನಕ್ಕೆ ನಾನು ಹಲವು ಬೆಳವಣಿಗೆಗಳಿಗೆ ಸಾಕ್ಷಿಯಾಗುತ್ತಾ ಬಂದಂತೆ ನಾನು ಎಲ್ಲಾ ಭೋಗವಸ್ತುಗಳು ಮತ್ತು ಶ್ರೀಮಂತಿಕೆಯನ್ನು ತೊರೆಯಬೇಕೆಂದು ನಿರ್ಧರಿಸಿದೆ.

ನಾನು ಕಂಡುಕೊಂಡ ಸತ್ಯಗಳನ್ನು ಇಲ್ಲಿ ವಿವರಿಸಿ ಹೇಳಲು ಹೋಗುವುದಿಲ್ಲ. ಒಂದು ಸುಸಂದರ್ಭದಲ್ಲಿ ತಕ್ಷಣವೇ ನಾನು ಎಲ್ಲವನ್ನೂ ತೊರೆಯಲು ನಿರ್ಧರಿಸಿದೆ. ಆರಂಭದಲ್ಲಿ ಈ ಪ್ರಯೋಗ ನಿಧಾನವಾಗಿ ಜರುಗಿತೆಂದು ನಿಮ್ಮ ಮುಂದೆ ನನ್ನ ತಪ್ಪನ್ನು ಒಪ್ಪಿಕೊಳ್ಳುತ್ತೇನೆ. ಈಗ ಆ ಹೋರಾಟದ ದಿನಗಳನ್ನು ನೆನಪು ಮಾಡಿಕೊಳ್ಳುತ್ತಿದ್ದೇನೆ. ಆರಂಭದಲ್ಲಿ ಎಲ್ಲವನ್ನು ನಿರಾಕರಿಸುವುದು ನೋವಿನ ಸಂಗತಿಯಾಗಿತ್ತು ಎಂಬುದನ್ನು ಈಗಲೂ ಜ್ಞಾಪಿಸಿಕೊಳ್ಳುತ್ತೇನೆ. ಆದರೆ, ದಿನ ಕಳೆದಂತೆ ಇವೆಲ್ಲವೂ ನನ್ನದು ಎಂದು ಭಾವಿಸಿದ್ದ ಎಲ್ಲವನ್ನೂ ತ್ಯಜಿಸುತ್ತಾ ಸಾಗಿದೆ. ಏನೂ ಇಲ್ಲದ ಸುಖ ಮತ್ತು ಸಂತೋಷವನ್ನು ಅನುಭವಿಸಬೇಕಾದರೆ ಇದು ನನಗೆ ಅನಿವಾರ್ಯವಾಯಿತು ಒಂದರ ನಂತರ ಮತ್ತೊಂದು ಹೀಗೆ ಎಲ್ಲವನ್ನು ತ್ಯಜಿಸುತ್ತಾ ಬಂದಂತೆ ನನ್ನೊಳಗಿನ ಕೆಲವು ಸ್ವಾರ್ಥದ ಆಲೋಚನೆಗಳು ದೂರವಾಗತೊಡಗಿದವು. ಸುಖದ ವಸ್ತುಗಳನ್ನು ತೊರೆಯುವುದೂ ಸಹ ನನ್ನ ಪಾಲಿಗೆ ಹೊಸ ಪ್ರಯೋಗವಾಗಿತ್ತು. ನನ್ನ ಹೆಗಲ ಮೇಲಿದ್ದ ದೊಡ್ಡ ಭಾರವೊಂದನ್ನು ಕೆಳಗಿಳಿಸಿದ ಅನುಭವ ನನಗಾಯಿತು. ಈಗ ನಾನು ನಿರಾಳವಾಗಿ ನೆಮ್ಮದಿಯಿಂದ ನಡೆದಾಡಬಲ್ಲೆ ಮತ್ತು ಕಾರ್ಯ ನಿರ್ವಹಿಸಬಲ್ಲೆ ಎಂದು ಅನಿಸತೊಡಗಿತು. ಜೊತೆಗೆ ನನ್ನ ಅನುಯಾಯಿಗಳ ಸೇವೆಗೆ ಇಂತಹ ಆಯ್ಕೆಯ ಬಡತನ ಅಥವಾ ಸರಳವಾದ ಜೀವನ ಯೋಗ್ಯವಾದುದು ಎಂದು ಅನಿಸಿತು. ಏನನ್ನಾದರೂ ಹೊಂದುವುದೆಂದರೆ, ಅದು ನನ್ನ ಪಾಲಿಗೆ ತ್ರಾಸದಾಯಕ ಎಂಬ ಭಾವನೆ ನನ್ನೊಳಗೆ ಬಲಿಯತೊಡಗಿತು.

ಮುಂದುವರೆಯುವುದು...



ಸುಂದರಲಾಲ್ ಬಹುಗುಣ

ಗಾಂಧಿವಾದಿ, ಖ್ಯಾತ ಪರಿಸರವಾದಿ, ಭಾರತದಲ್ಲಿ ಅರಣ್ಯವನ್ನು ಉಳಿಸಲು ಚಿಪ್ಕೊ (ಅಪ್ಪಿಕೊ) ಎಂಬ ಚಳವಳಿಯನ್ನು ಹುಟ್ಟುಹಾಕಿದ ಹೋರಾಟಗಾರ ಸುಂದರಲಾಲ್ ಬಹುಗುಣ ಅವರು 1927, ಜನವರಿ 9ರಂದು ಉತ್ತರಾಖಂಡ್‌ನ ತೆಹ್ರಿ ಗರ್ವಾಲ್ ಜಿಲ್ಲೆಯ ಮರೋಡಾ ಎಂಬಲ್ಲಿ ಜನಿಸಿದರು. ಚಿಪ್ಕೊ ಎಂಬ ಚಳವಳಿಯ ವಿಚಾರ ಹುಟ್ಟಿದ್ದು ಮೊದಲಿಗೆ ಬಹುಗುಣ ಅವರ ಪತ್ನಿಯವರಲ್ಲಿ. ಬಳಿಕ ಸುಂದರಲಾಲ್ ಅದನ್ನು ಕಾರ್ಯಾಚರಣೆಗೆ ತಂದರು. ಆರಂಭದಲ್ಲಿ ಚಿಪ್ಕೊ ಚಳವಳಿಯ ಸದಸ್ಯನಾಗಿ ಹಿಮಾಲಯದ ಅರಣ್ಯದ ಸಂರಕ್ಷಣಾ ಕಾರ್ಯ ಕೈಗೊಂಡ ಅವರು, ಆ ಬಳಿಕ 1980-2004ರ ಅವಧಿಯಲ್ಲಿ ತೆಹ್ರಿ ಅಣೆಕಟ್ಟೆ ವಿರೋಧಿ ಚಳಲವಳಿಯನ್ನು ನಡೆಸಿದರು.

ಅಸ್ಪೃಶ್ಯತಾ ವಿರೋಧಿ ಹೋರಾಟ, ಪಾನನಿರೋಧ ಚಳವಳಿ, 1947ರ ಪೂರ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ಸೇರಿದಂತೆ ಹಲವು ಸಾಮಾಜಿಕ ಚಳವಳಿಗಳಲ್ಲಿ ಸುಂದರಲಾಲ್ ಬಹುಗುಣ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪರಿಸರವು ಶಾಶ್ವತ ಆರ್ಥಿಕತೆ ಎಂದು ಸುಂದಗಲಾಲ್ ಸಾರಿದ್ದರು. ಅವರ ಸಾಮಾಜಿಕ ಸೇವೆಗೆ 1981ರಲ್ಲಿ ಭಾರತ ಸರ್ಕಾರದಿಂದ ಪದ್ಮ ವಿಭೂಷಣ, 1987ರಲ್ಲಿ ರೈಟ್ ಲೈವ್ಲಿಹುಡ್, 1989ರಲ್ಲಿ ಐಐಟಿ ರೂರ್ಕಿಯಿಂದ ಗೌರವ ಡಾಕ್ಟರೇಟ್ ಸೇರಿದಂತೆ ಹಲವು ಪ್ರಶಸ್ತಿ, ಗೌರವಗಳು ಹುಡುಕಿಕೊಂಡು ಬಂದಿವೆ. ಪದ್ಮಶ್ರೀ ಪ್ರಶಸ್ತಿಯನ್ನು ಅವರು ನಿರಾಕರಿಸಿದ್ದರು. ಪರಿಸರಕ್ಕೆ ಸಂಬಂಧಿಸಿದಂತೆ ಕೆಲವು ಪುಸ್ತಕಗಳನ್ನು ಅವರು ರಚಿಸಿದ್ದಾರೆ.



ಕನ್ನಡ-ಕನ್ನಡಿಗ-ಕರ್ನಾಟಕ

- ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)

ಏಕೀಕರಣ ಮಾರ್ಗದ ದಿಟ್ಟ ನಡಿಗೆಗಳು

ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿ 565 ಸಂಸ್ಥಾನಗಳು ಇದ್ದು, ಆ ಎಲ್ಲ ಸಂಸ್ಥಾನಗಳನ್ನು ರಾಜ ಮಹಾರಾಜರು ಮತ್ತು ಅವರ ಮಾಂಡಲೀಕರು ಆಳುತ್ತಿದ್ದರು. ಬ್ರಿಟೀಷರು ಆ ಎಲ್ಲ ಸಂಸ್ಥಾನಗಳಿಗೆ ಒಂದು ಆಹ್ವಾನವನ್ನು ನೀಡಿದ್ದರು. ಅವರು ಮೂರು ವಿಧಾನಗಳನ್ನು ಸೂಚಿಸಿದ್ದರು. (1) ಸಂಸ್ಥಾನಿಕರು ಭಾರತ ಒಕ್ಕೂಟದಲ್ಲಿ ಸೇರಬಹುದು. (2) ಪಾಕಿಸ್ತಾನಕ್ಕೂ ಸೇರಬಹುದು, (3) ಪ್ರತ್ಯೇಕವಾಗಿಯೂ ಉಳಿಯಬಹುದು. ಹೀಗೆ ಮೂರು ವಿಧಾನದಲ್ಲಿ ಅವರ ಅಸ್ತಿತ್ವ ಮತ್ತು ಆಡಳಿತದ ಮುಂದುವರಿಕೆಗೆ ಕರೆ ನೀಡುವ ಮೂಲಕ ಅಧಿಕಾರದ ಆಸೆ ಬಿತ್ತಿ ಹೋದರು.

ಈ ಹಿನ್ನಲೆಯಲ್ಲಿ ಭಾರತದ ಅವಿಭಾಜ್ಯ ಅಂಗವಾಗಿರುವ ಜಮು-ಕಾಶ್ಮೀರದ ರಾಜ ಹರಿಸಿಂಗ್, ಪಂಜಾಬ್ ಪ್ರಾಂತ್ಯದ ಜುನಾಗಡ ಸಂಸ್ಥಾನದ ಮಹಾರಾಜ ಮೊಹಮ್ಮದ್ ಮೊಹಬತ್ ಹಾಗೂ ಹೈದ್ರಾಬಾದ ಸಂಸ್ಥಾನದ ನಿಜಾಮರಾದ ಮೀರ್ ಉಸ್ಮಾನ ಅಲೀ ಖಾನ ಇವರುಗಳು ಆಗಸ್ಟ್ 15, 1947 ರಂದು ಭಾರತ ಒಕ್ಕೂಟದಲ್ಲಿ ಸೇರಲು ನಿರಾಕರಿಸುತ್ತಾ ಪ್ರತ್ಯೇಕವಾಗಿ ಉಳಿಯಲು ನಿರ್ಧರಿಸಿದರು.


ಕಾಲ ಕ್ರಮೇಣ ಜಮ್ಮು ಕಾಶ್ಮೀರ ಸಂಸ್ಥಾನವು ಕೆಲವು ಷರತ್ತುಗಳನ್ನು ಒಡ್ಡಿ ಸಂವಿಧಾನದ ಅನುಚ್ಛೇದ 370ರ ಅಡಿಯಲ್ಲಿ ರಕ್ಷಣೆಯನ್ನು ಪಡೆದು ಭಾರತ ಒಕ್ಕೂಟದಲ್ಲಿ ಸೇರಿತು.ಅದೇ ರೀತಿ ಜುನಾಗಡ ಸಂಸ್ಥಾನವು ಸಹ 24 ನೇ ಫೆಬ್ರವರಿ 1948ರಂದು ಭಾರತ ಒಕ್ಕೂಟದಲ್ಲಿ ಸೇರಲು ಒಪ್ಪಿಕೊಂಡಿತು.

ಆದರೆ ಹೈದ್ರಾಬಾದ್ ಸಂಸ್ಥಾನದ ನಿಜಾಮರು ಪ್ರತ್ಯೇಕವಾಗಿ ಉಳಿಯುವ ಯೋಚನೆಯೊಂದಿಗೆ ಭಾರತ ಸರಕಾರಕ್ಕೆ ಒಂದು ವರ್ಷಗಳ ಕಾಲವಕಾಶವನ್ನು 'ಸ್ಟ್ಯಾಂಡ್ ಸ್ಟಿಲ್ ಅಗ್ರಿಮೆಂಟ್' ಮುಖಾಂತರ ಕೋರಿದರು. ಹಾಗಾಗಿಯೇ ಈ ಸಂಸ್ಥಾನವು ಅಂದು ಭಾರತದ ಒಕ್ಕೂಟದಿಂದ ಪ್ರತ್ಯೇಕವಾಗಿಯೇ ಉಳಿಯಿತು.

ಆಗಸ್ಟ್ 15, 1947 ರಂದು ದೇಶದಲ್ಲೆಡೆ ಜನ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸುತ್ತ ಸ್ವಾತಂತ್ರ್ಯದ ಸಂತೋಷವನ್ನು ಅನುಭವಿಸುತ್ತಿದ್ದರೆ, ಹೈದ್ರಾಬಾದ್ ರಾಜ್ಯದ ಸ್ವಾತಂತ್ರ್ಯಪ್ರಿಯ ಜನರು ನೋವು ಮತ್ತು ಸಂಕಟದಲ್ಲಿ ನಲುಗಿದರು. ಮತ್ತು ಅವರು ಮತ್ತೊಂದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಿದ್ದರಾಗುವುದು ಅನಿವಾರ್ಯವಾಯಿತು.

ಅಲ್ಲಿನ ರಾಷ್ಟ್ರೀಯ ನಾಯಕರು ಆ ಸಂಸ್ಥಾನವನ್ನು ಭಾರತ ಒಕ್ಕೂಟದಲ್ಲಿ ವಿಲೀನ ಮಾಡಬೇಕು ಎಂದು ಹೋರಾಟ ಮಾಡುತ್ತ ಬಂದರು, ಅವರು ಭಾರತ ಸರ್ಕಾರದ ಪರವಾಗಿ ನಿಂತರು. ಅದರ ಪ್ರತಿಫಲವಾಗಿ ಸರ್ಕಾರ ನಿಜಾಮರಿಗೆ ಭಾರತದ ಒಕ್ಕೂಟದಲ್ಲಿ ಸೇರಲು ಒತ್ತಾಯಪಡಿಸಿದರು. ಆದರೆ ನಿಜಾಮರು ಪಾಕಿಸ್ತಾನಕ್ಕೆ ಸೇರ್ಪಡೆಯಾಗುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಇದರಿಂದಾಗಿ ಅಂದು ಭಾರತ ಒಕ್ಕೂಟದೊಳಗೆ ರಾಜ್ಯಗಳನ್ನು ಸೇರ್ಪಡೆ ಮಾಡಿಸುವ ಮಹತ್ತರ ಕಾರ್ಯದಲ್ಲಿ ತೊಡಗಿಕೊಂಡಿದ್ದ ವಲ್ಲಭ ಬಾಯಿ ಪಟೇಲರನ್ನು ಕೆಂಡಮಂಡಲವಾಗಿಸಿತು. ರಾಷ್ಟ್ರ ನಾಯಕರೊಂದಿಗೆ ಸುದೀರ್ಘ ಚರ್ಚೆಗಳು ನಡೆದವು ಚರ್ಚೆಯ ನಂತರ ಹೈದ್ರಾಬಾದ್ ಸಂಸ್ಥಾನದಲ್ಲಿ ಭಾರತ ಸರಕಾರವು ಪೋಲಿಸ್ ಕಾರ್ಯಚರಣೆ 'ಆಪರೇಶನ್ ಪೋಲೋ' ದಿನಾಂಕ 13-09-1948 ರಿಂದ 19-09-1948 ರವರೆಗೆ ನಡೆಸಿದರು. ಹೈದ್ರಬಾದ್ ನಗರವನ್ನು ಮುತ್ತಿಗೆ ಹಾಕಲಾಯಿತು.

ಮುಂದುವರಿಯುವುದು ...



ಕರ್ನಾಟಕ ಗೆಜೆಟಿಯರ್‌ನಲ್ಲಿ ಪ್ರಕಟವಾಗಿರುವ ಏಕೀಕೃತ ಕರ್ನಾಟಕದ ಭೂಪಟ

ಗಡಿನಾಡ ಗಾಂಧಿ

– ಶಶಾಂಕ : (ಕೃಪೆ : ಸುಧಾ , ಮಾರ್ಚ್ 2001

'ಗಡಿನಾಡು ಗಾಂಧಿ' ಎಂದೇ ಸ್ವತಂತ್ರ ಭಾರತದ ಇತಿಹಾಸದಲ್ಲಿ ಪ್ರಸಿದ್ಧಿ ಪಡೆದಿರುವ ಖಾನ್ ಅಬ್ದುಲ್ ಗಫಾರ್ ಖಾನ್ ಅಫ್ಘಾನಿಸ್ತಾನದ ಪೇಷಾವರ ಜಿಲ್ಲೆಯಲ್ಲಿ ಜನಿಸಿದವರು. (ಜನನ: 1890). ಜಮೀನ್ದಾರ ಕುಟುಂಬಕ್ಕೆ ಸೇರಿದ ಅವರು ಪೇಷಾವರ ಹೈಸ್ಕೂಲಿನಲ್ಲಿ ಮೆಟ್ರಿಕ್ಯುಲೇಷನ್ ಓದಿ, ಅನಂತರ ಅಲಿಘರ್ ಶಾಲೆ ಒಂದರಲ್ಲಿ ಅರಬ್ ಭಾಷೆ – ಗಣಿತ ಕಲಿತರು. ಇಂಗ್ಲೆಂಡಿನಲ್ಲಿ ಅಧ್ಯಯನ ಮಾಡುತ್ತಿದ್ದ ಅಣ್ಣ, ತಮ್ಮನಿಗೂ ಅಲ್ಲಿಗೆ ಬಂದು ವಿದ್ಯಾಭ್ಯಾಸ ಮುಂದುವರೆಸುವಂತೆ ಮಾಡಿದ ಸಲಹೆಯನ್ನು ತಾಯಿ ಒಪ್ಪಲಿಲ್ಲ. ಹೆತ್ತ ಕರುಳಿಗೆ ನೋವನ್ನುಂಟುಮಾಡಲು ಬಯಸದ ಖಾನ್, ತಮ್ಮ ಜೀವನವನ್ನು ಸಾರ್ವಜನಿಕ ಸೇವೆಗೆ ಮುಡಿಪಾಗಿರಿಸುವ ದೀಕ್ಷೆ ತೊಟ್ಟರು. ಖಾನ್‌ರಿಗೆ ಪಠಾಣರಿಗೆ ವಿದ್ಯಾಭ್ಯಾಸ ನೀಡುವ ಅವಶ್ಯಕತೆ ಕಂಡಿತು. ಆ ನಿಟ್ಟಿನಲ್ಲಿ ಅವರು 'ದಾರ್–ಉಲ್–ಉಲುಮ್' ಎಂಬ ಶಿಕ್ಷಣ ಸಂಸ್ಥೆಯನ್ನು ಆರಂಬಿಸಿದರು.

ವಿದ್ಯಾರ್ಥಿಯಾಗಿದ್ದಾಗಲೇ ಗಫಾರ್‌ಖಾನ್ ಭಾರತೀಯ ರಾಜಕಾರಣಿಗಳ ಪ್ರಭಾವಕ್ಕೆ ಒಳಗಾದರು. ಆ ದಿನಗಳಲ್ಲಿ ಅವರ ಮೇಲೆ ಹೆಚ್ಚು ಪ್ರಭಾವ ಬೀರಿದ ವ್ಯಕ್ತಿ ಅಬ್ದುಲ್ ಕಲಾಂ ಆಜಾದ್, ಆಜಾದ್ ಅವರ 'ಅಲ್‌ಹಿಲಾಲ್' ಉರ್ದು ವಾರಪತ್ರಿಕೆಯನ್ನು ಖಾನ್ ತಪ್ಪದೇ ಓದುತ್ತಿದ್ದರು. ಆ ಮೂಲಕ ಭಾರತೀಯ ಅನೇಕ ಮುಖಂಡರ ಪರಿಚಯವಾಗಲು ಸಹಕಾರಿಯಾಯಿತು. ಮಹಾತ್ಮಾ ಗಾಂಧಿ ಅವರ ಪ್ರಭಾವಕ್ಕೆ ಒಳಗಾದ ಖಾನ್ ಅಹಿಂಸಾ ಚಳವಳಿ ದೀಕ್ಷೆ ಕೈಗೊಂಡರು. ಅಷ್ಟೇ ಅಲ್ಲ ಬ್ರಿಟಿಷರ ಆಳ್ವಿಕೆ ವಿರುದ್ಧ ಹೋರಾಡಲು 'ಖುದೈ-ಖಿದ್ಮತ್ಗಾರ್' ಎಂಬ ಯುವತಂಡ ಕಟ್ಟಿದರು.

'ಖುದೈ–ಖಿದ್ಮತ್ಗಾರ್' ತಂಡದವರು ರೋಲೆಟ್ ಮಸೂದೆ ಪ್ರತಿಭಟಿಸುವ ಮೂಲಕ ಚಳುವಳಿಗೆ ನಾಂದಿ ಹಾಡಿದರು. ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಭಾಷಣ ಮಾಡಿದ ಗಫಾರ್‌ಖಾನ್ ಹಾಗು ಅವರ ತಂದೆಯವರನ್ನು ಬಂದಿಸಿದ ಬ್ರಿಟಿಷರು, ಅವರಿಬ್ಬರಿಗೂ ಆರು ತಿಂಗಳ ಕಾಲ ಸೆರೆ ಶಿಕ್ಷೆ ವಿಧಿಸಿದರು.

'ಖಿಲಾಪತ್ ಚಳುವಳಿ' ನಡೆದಾಗ ಖಾನ್ ಪೇಷಾವರದ ನಾಯಕನಾಗಿ ರೂಪುಗೊಂಡರು. ಚಳುವಳಿಯಲ್ಲಿ ಭಾಗವಹಿಸಿದ ಪರಿಣಾಮವಾಗಿ




ಅವರು ಮೂರು ವರ್ಷಗಳ ಕಾಲ ಕಠಿಣ ಶಿಕ್ಷೆಯನ್ನು ಅನುಭವಿಸಬೇಕಾಯಿತು. ನಂತರ ಪಠಾಣರು ಖಾನ್‌ರಿಗೆ 'ಫಕೀರ್–ಇ–ಆಫ್ಘನ್' ಎಂಬ ಬಿರುದು ನೀಡಿ ಗೌರವಿಸಿದರು.

1929ರಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾರತೀಯರಿಗೆ ಅಜಾನುಬಾಹು ಖಾನರು ಹೆಚ್ಚು ಪರಿಚಿತರಾದರು. ಆ ಸಮಯದಲ್ಲೇ ಅವರು ಅಖಿಲ ಭಾರತ ನಾಯಕರ ಸಾಲಿನಲ್ಲಿ ಸೇರ್ಪಡೆಗೊಂಡರು. ಪೇಷಾವರ ಚಳುವಳಿಯಲ್ಲಿ ಖಾನ್ ಮತ್ತೆ ಮೂರು ವರ್ಷಗಳ ಸೆರೆವಾಸದ ಶಿಕ್ಷೆಗೆ ಗುರಿಯಾದರು. ಆದರೆ ಗಾಂಧೀಜಿ ಅವರ ಪ್ರಯತ್ನದಿಂದಾಗಿ ಬಿಡುಗಡೆಗೊಂಡು ಆನಂತರದಲ್ಲಿ ಖಾನರು 'ಗಡಿನಾಡ ಗಾಂಧಿ' ಎಂದೇ ಪರಿಚಿತರಾದರು.

ಭಾರತದ ಉದ್ದಗಲವೂ ಸಂಚರಿಸುತ್ತ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಖಾನ್, ವಾರ್ಧಾಕ್ಕೂ ಭೇಟಿ ನೀಡಿ ಗಾಂಧೀಜಿ ಅವರ ಆಶ್ರಮದಲ್ಲಿ ಕೆಲ ತಿಂಗಳು ಕಾಲ ಕಳೆದು, ಅವರ ಸರಳ ಜೀವನಕ್ಕೆ, ಆದರ್ಶಕ್ಕೆ ಮಾರು ಹೋಗಿ ಗಾಂಧೀಜಿ ಅವರ ಪರಮ ಭಕ್ತರಾದರು.

ಗಡಿನಾಡು ಪ್ರದೇಶಗಳಲ್ಲಿ ಗಾಂಧೀಜಿ ತತ್ವಗಳನ್ನು ಅನುಷ್ಠಾನಕ್ಕೆ ತರಲು ನಿರ್ಧರಿಸಿದ ಖಾನ್ ಆ ನಿಟ್ಟಿನಲ್ಲಿ




ಕಾರ್ಯಪ್ರವೃತ್ತರಾದರು. ಗಡಿನಾಡ ಪ್ರದೇಶದಲ್ಲಿ ಚುನಾವಣೆ ನಡೆದಾಗ ಗಫಾರ್‌ಖಾನರ ನಾಯಕತ್ವದಲ್ಲಿ ಕಾಂಗ್ರೆಸ್ ಗೆದ್ದು, ಅಣ್ಣ ಡಾ. ಖಾನ್ ಸಾಹೇಬರು ಮುಖ್ಯಮಂತ್ರಿಯಾದರು.

1942ರಲ್ಲಿ ಮಹಾತ್ಮ ಗಾಂಧೀಜಿ ಅವರು 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಕರೆ ನೀಡಿದಾಗ ಗಫಾರ್‌ಖಾನರೂ ತಮ್ಮ ಪ್ರಾಂತ್ಯದಲ್ಲಿ ಚಳುವಳಿಯಲ್ಲಿ ಭಾಗವಹಿಸುವಂತೆ ಒಂದು ಲಕ್ಷ ಜನ ಸ್ವಯಂ ಸೇವಕರಿಗೆ ಕರೆ ನೀಡಿದರು. ಸರ್ಕಾರ ಅವರನ್ನು ಬಂಧಿಸಿತು. 1945ರಲ್ಲಿ ಗಫಾರ್ ಖಾನ್ ಸೆರೆಯಿಂದ ಬಿಡುಗಡೆ ಹೊಂದಿದರು. ಸ್ವಾತಂತ್ರ್ಯ ಭಾರತದ ನಿರ್ಮಾಣದ ಬಗ್ಗೆ ಬ್ರಿಟಿಷರು ನಡೆಸಿದ ಮಾತುಕತೆಯಲ್ಲಿ ಜಿನ್ನಾ ಅವರು ಪ್ರತ್ಯೇಕ ಪಾಕಿಸ್ತಾನ ಸ್ಥಾಪನೆ ಕುರಿತು ವಾದ ಮಂಡಿಸಿದಾಗ ಖಾನ್ ಅದನ್ನು ಸ್ಪಷ್ಟವಾಗಿ ವಿರೋಧಿಸಿದರು. ಭಾರತದ ಐಕ್ಯತೆ ಹಿಂದೂ – ಮುಸ್ಲಿಂ ಏಕತೆ ಅವರ ಪರಮ ಉದ್ದೇಶವಾಗಿತ್ತು. ಆದರೆ ಸನ್ನಿವೇಶದ ಬಿಕ್ಕಟ್ಟಿನಿಂದ ಪಾಕಿಸ್ತಾನ ರೂಪುಗೊಂಡಾಗ ಗಫಾರ್‌ಖಾನ್ 'ಫಖ್ತೂನಿಸ್ತಾನ'ಕ್ಕಾಗಿ ಚಳವಳಿ ಆರಂಭಿಸಿದರು. ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ 15 ವರ್ಷಗಳ ಕಾಲ ಸೆರೆಮನೆ ವಾಸ ಅನುಭವಿಸಿದ ಗಫಾರ್ ಖಾನ್ ಸ್ವಾತಂತ್ರ್ಯ ಬಂದ ಮೇಲೂ ಪಾಕಿಸ್ತಾನದ ಆಡಳಿತದಲ್ಲಿ ಅವರು ಹಲವಾರು ವರ್ಷಗಳ ಕಾಲ ಸೆರೆಮನೆ ವಾಸ ಅನುಭವಿಸಿದರು. ಕೊನೆಗೆ ಪಾಕಿಸ್ತಾನ ಸರ್ಕಾರ ಅವರನ್ನು ದೇಶ ಭ್ರಷ್ಟನೆಂದು ಘೋಷಿಸಿತು. ಅಫ್ಘಾನಿಸ್ತಾವನ್ನು ತೊರೆದ ಗಫಾರ್ ಖಾನ್ ಮುಂದೆ ಕಾಬೂಲಿಗೆ ಹೋದರು. ಪಾಕಿಸ್ತಾನದ ಸೇನಾ ಸರ್ವಾಧಿಕಾರಿಗಳ ವಿರುದ್ಧ ಅವರು ಸಮರ ಸಾರಿದರು.

ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸುವಂತೆ ಕರೆ ನೀಡಿದರು. ಪಾಕಿಸ್ತಾನ ಭಾರತದ ಮೇಲೆ 1965ರಲ್ಲಿ ಯುದ್ಧ ಘೋಷಿಸಿದಾಗ ಅವರು ತುಂಬಾ ನೊಂದುಕೊಂಡರು. 1969ರಲ್ಲಿ ಗಾಂಧೀಜಿ ಅವರ ಶತಮಾನೋತ್ಸವದ ಸಂದರ್ಭದಲ್ಲಿ ಖಾನ್ ಅವರನ್ನು ಕರೆಯಿಸಿ ಗೌರವಿಸಲಾಯಿತು. ಅಲ್ಲದೆ 'ನೆಹರೂ ಸ್ಮಾರಕ ಅಂತರರಾಷ್ಟ್ರೀಯ ಸೌಹಾರ್ದ ಪ್ರಶಸ್ತಿ' ನೀಡಲಾಯಿತು.

1972ರಲ್ಲಿ ಪಾಕಿಸ್ತಾನಕ್ಕೆ ಗಫಾರ್ ಖಾನ್ ಮರಳಿ ಹೋದರು. ಆಗ ನಡೆದ ಚುನಾವಣೆಯಲ್ಲಿ ಅವರ ಘನಿಖಾನ್ ಹಾಗೂ ಅವಾಮಿ ಪಕ್ಷದವರು ಗಡಿನಾಡಿನಲ್ಲಿ ಗೆದ್ದು ಆಡಳಿತಾರೂಢರಾದರು. ಆದರೆ ಭುಟ್ಟೋ ಅವರು ಗಫಾರ್ ಖಾನ್ ಅವರನ್ನು ಬಂಧಿಸಿ ಸೆರೆಮನೆಯಲ್ಲಿರಿಸಿ ಅನಂತರ ಬಿಡುಗಡೆ ಮಾಡಿದರು. ಜಿಯಾ ಉಲ್ ಹಕ್ ಸರ್ಕಾರವೂ ಗಫಾರ್‌ಖಾನ್ ಮೇಲೆ ಸಿಂಧ್ ಮತ್ತು ಬಲೂಚಿಸ್ತಾನ್ ಪ್ರವೇಶಿಸದಂತೆ ನಿರ್ಬಂದಿಸಿತು. 1978ರಲ್ಲಿ ಕಾಬೂಲಿಗೆ ಹೋದ ಗಫಾರ್ ಖಾನ್ ಅಲ್ಲಿಂದ ಮುಂದೆ ರಾಜಕೀಯದಿಂದ ದೂರ ಸರಿದು ಗ್ರಾಮ ಪುನರ್ರಚನೆಯ ಕಾರ್ಯದಲ್ಲಿ ಮಗ್ನರಾದರು. 1985ರ ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಭಾರತಕ್ಕೆ ಬಂದ ಖಾನರು ಅನೇಕ ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿದರು. 1987ರಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ಮುಂಬೈಗೆ ಬಂದಾಗ ಆ ಸಂದರ್ಭದಲ್ಲಿ ಅವರನ್ನು ದೆಹಲಿಗೆ ಕರೆಯಿಸಿ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. 1988ರ ಜನವರಿ 20ರಂದು 'ಗಡಿನಾಡ ಗಾಂಧಿ' ತಮ್ಮ 98ನೇ ವಯಸ್ಸಿನಲ್ಲಿ ವಿಧಿವಶರಾದರು.

ಗಾಂಧಿ



– ಗೋವಿಂದ ಪೈ

ಇನ್ನಿನಿಸು ನೀ ಮಹಾತ್ಮ ಬದುಕಬೇಕಿತ್ತು
ಈಗ ಭಾರತಗತ್ಯಗತ್ಯವಿದೆ

ಹಿಮನಗವೊ ನಿನ್ನ ಛಲ
ವಿಮಲ ಭಗವತ್ ಭಕ್ತಿ
ಜಗವನಪ್ಪುವ ವಾರ್ದಿಯನೆ ಜಗತ್ ಪ್ರೀತಿ

ನಿನ್ನ ಸೂರ್ಯ ತಪಕದಿಂದ ಮಾತ್ಮಿಕ ಶಕ್ತಿ
ಸ್ವಾರ್ಥಪರರಾಗಿಹೆವು ದೇವರಿಲ್ಲ ನಮಗಿಂದು
ಬದುಕ ಬೇಕಿತ್ತು ಮಹಾತ್ಮ

ಸೋದರತೆ ಈಗಿಲ್ಲಮೆಗೆ
ಮುಂದಿನದಿಲ್ಲ ಗೊಡವೆ
ಧರ್ಮ ಬಾಹಿರರೆಮ್ಮ
ಎತ್ತಲಿನ್ನರಾಂದು ತೋಚದೆ ಮಹಾತ್ಮ
ನೀನಗಿತ್ತು ಮೊರೆಯಿಡುವೆ
ಗಾಳಿ ಕಾಣದ ಬೀಸಿ ಉಸುರುಗೊಳಿಪಂತೆ
ತಾರ ನವಜೀವನವ ನಮ್ಮನುಳಿಪಂತೆ

ಬದುಕ ಬೇಕಿತ್ತು ಮಹಾತ್ಮ
ಬದುಕ ಬೇಕಿತ್ತು ಮಹಾತ್ಮ

ಅಕ್ಷರ ಮಾತೆ ಸಾವಿತ್ರಿ ಬಾಪುಲೆ

ಇಂದಿರಾ ಕೃಷ್ಣಪ್ಪ

ಇಂದಿನ ಶಿಕ್ಷಣ ಕ್ಷೇತ್ರದಲ್ಲಿನ ಅನೇಕ ಕ್ರಾಂತಿಕಾರಿ ಬದಲಾವಣೆಗಳಿಗೆ, 170 ವರ್ಷಗಳ ಪೂರ್ವದಲ್ಲಿಯೇ ಭದ್ರ ಬುನಾದಿ ಹಾಕಿದ ಮಹಿಳೆ ಸಾವಿತ್ರಿ ಬಾಪುಲೆ ಅವರಾಗಿದ್ದಾರೆ. ವರ್ತಮಾನದಲ್ಲಿ ಗ್ರಾಮಾಂತರ ಮತ್ತು ಹಿಂದುಳಿದ ಪ್ರದೇಶದಲ್ಲಿ ಪಾಠಶಾಲೆಗಳು, ಮಕ್ಕಳಿಗೆ ಬಿಸಿಯೂಟ, ಶಾಲೆ ತೊರೆಯದ ಮಕ್ಕಳಿಗೆ ವಿದ್ಯಾರ್ಥಿ ವೇತನ, ಅನಾಥ ಮಕ್ಕಳಿಗಾಗಿ ಶಿಶುಕೇಂದ್ರ, ರಾತ್ರಿ ಶಾಲೆಗಳು, ಅಬಲಾಶ್ರಮ ಇನ್ನೂ ಮುಂತಾದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗೆ ನಿದರ್ಶನವಾಗುವ ಕಾರ್ಯಗಳನ್ನು ಪುಲೆ ದಂಪತಿಗಳು ಅವರ ಜೀವಮಾನವಿಡಿ ಮಾಡಿದ್ದಾರೆ.

ಜ್ಯೋತಿ ಬಾಪುಲೆ ಅವರು ಸಾವಿತ್ರಿ ಬಾಯಿ ಅವರನ್ನು ವಿವಾಹವಾದಾಗ ಇಬ್ಬರಿಗೂ ಕ್ರಮವಾಗಿ 13 ಮತ್ತು 8 ವರ್ಷ ವಯಸ್ಸಾಗಿತ್ತು. ಬಾಲ್ಯವಿವಾಹವಾದ ದಂಪತಿಗಳು, ಮಕ್ಕಳಾಟಿಕೆಯಲ್ಲಿ ಕಾಲವ್ಯಯ ಮಾಡದೆ, ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಿದರು. ಜ್ಯೋತಿಬಾಪುಲೆ ಅವರೇ ಸಾವಿತ್ರಿಗೆ ಮೊದಲ ಗುರುವಾದರು. ಅತ್ತೆಯ ಮನೆಯೇ ಮೊದಲ ಪಾಠಶಾಲೆ ಆಯಿತು. ತದನಂತರ ಶ್ರೀಮತಿ ಮಿಚೆಲ್ ಅವರ ನಾರ್ಮಲ್ ಶಾಲೆಯಲ್ಲಿ 'ಅಧ್ಯಾಪನಾ ತರಬೇತಿ' ಪಡೆದರು. ಹೀಗೆ ಸಾವಿತ್ರಿ ಬಾಯಿ ಅವರು, ತರಬೇತಿ ಪಡೆದ ಮೊದಲ ಮಹಿಳಾ ಅಧ್ಯಾಪಕಿ ಆಗಿದ್ದಾರೆ.

ದಂಪತಿಗಳು ಒಟ್ಟಾಗಿ ಪ್ರಾರಂಭಿಸಿದ ಮೊದಲ ಕನ್ಯಾ ಶಾಲೆ ಅವರ ಸ್ನೇಹ ಬಳಗದ ಭಿಡೆ ಅವರ ಪೂನಾದ ಮನೆಯೇ ಆಗಿತ್ತು. ಸಾವಿತ್ರಿ ಅಲ್ಲಿ ಮೊದಲ ಬಾರಿಗೆ ಪಾಠ ಹೇಳುವ ವೃತ್ತಿಯನ್ನು ಆರಂಭಿಸಿದರು. ಮಹಿಳಾ ಶಿಕ್ಷಣಕ್ಕೆ ಅವಕಾಶವಿಲ್ಲದ ಸಮಾಜದಲ್ಲಿ ಹೆಣ್ಣುಮಕ್ಕಳಿಗಾಗಿ ಶಾಲೆ ಪ್ರಾರಂಭಿಸಿದ್ದೂ ಅಲ್ಲದೆ, ಆಕೆಯೇ ಪಾಠ ಹೇಳಿಕೊಡಲು ನಿಂತದ್ದು, ಸಂಪ್ರದಾಯವಾದಿಗಳ ಕಣ್ಣು ಕೆಂಪಾಗಿಸಿತು. ಆಕೆಯ ಮೇಲೆ ಸಗಣಿ ನೀರು ಎರಚುವುದು, ಅವಾಚ್ಯ ಶಬ್ದಗಳ ನಿಂದನೆ, ಅನೇಕ ತೊಂದರೆಗಳನ್ನು ಅವರಿಗೆ ಕೊಡಲಾಯಿತು. ಎದೆಗುಂದದ ದಂಪತಿಗಳು 1848 ರಿಂದ 5 ವರ್ಷಗಳಲ್ಲಿ 18 ಶಾಲೆಗಳನ್ನೂ ಆರಂಭಿಸಿ ತಳಸಮುದಾಯದ ಮತ್ತು ಹೆಣ್ಣು ಮಕ್ಕಳು ಶಾಲೆಗೆ ಬರುವಂತೆ ಪ್ರೇರೇಪಿಸಿದರು. ಹೀಗೆ ಶಿಕ್ಷಣರಂಗದಲ್ಲಿ ಪರಿವರ್ತನೆ ತಂದ ಸಾವಿತ್ರಿಪುಲೆ, ಶಿಕ್ಷಕಿಯಾಗಿ ಆಡಳಿತಗಾರಳಾಗಿ ಮತ್ತು ನಿರ್ವಾಹಕಿಯಾಗಿ ಶಾಲೆಗಳನ್ನು ಅತ್ಯುತ್ತಮವಾಗಿ ಅಭಿವೃದ್ಧಿಗೊಳಿಸಿದ ಕಾರಣದಿಂದ ಅಂದಿನ ಬ್ರಿಟಿಷ್ ಸರ್ಕಾರ ಅವರಿಗೆ **'First Trained Teacher of India'** ಎಂದು ಶಾಲೆಯ ದಾಖಲಾತಿ ಪುಸ್ತಕಗಳಲ್ಲಿ ನಮೂದಿಸಿದರು.

ಅಂದಿನ ಸಮಾಜದಲ್ಲಿ ಜಾರಿಯಿದ್ದ ಅನಿಷ್ಠ ಪದ್ಧತಿಗಳಾದ ಬಾಲ್ಯವಿವಾಹ, ವಿಧವೆಯರ ನಿರ್ಲಕ್ಷತೆ, ಅಸ್ಪೃಶ್ಯತೆ,



ವಿರುದ್ಧ ಪುಲೆ ದಂಪತಿಗಳು ಸಮರವನ್ನೇ ಸಾರಿದರು. ವಿಧವೆಯರ ತಲೆಬೋಳಿಸುವ ಪದ್ಧತಿ ತೊಡೆದುಹಾಕಲು, ಕ್ಷೌರಿಕರನ್ನು ಕರೆದು ಅವರಿಗೆ ತಿಳುವಳಿಕೆ ಕೊಡುವುದರ ಮುಖಾಂತರ "ವಿಧವೆಯರ ತಲೆ ಭೋಳಿಸುವುದಿಲ್ಲ" ಎಂಬ ಪ್ರಮಾಣವನ್ನು ಅವರಿಂದ ಮಾಡಿಸಿ ಅನಿಷ್ಠ ಪದ್ಧತಿಗೆ ಇತಿಶ್ರೀ ಬರೆದರು. ವಿವಾಹ ಸಮಾರಂಭದ ಅರ್ಥವಿಲ್ಲದ ಶಾಸ್ತ್ರ ಸಂಪ್ರದಾಯಗಳಿಗೆ ವಿರಾಮ ಹೇಳಿ, ಸರಳ ವಿವಾಹಗಳಿಗೆ ನಾಂದಿ ಹಾಡಿದರು. ವಿಧವಾ ವಿವಾಹಕ್ಕೆ ಉತ್ತೇಜನ ನೀಡಿದರು. ವಿಧವೆಯರು ಮತ್ತು ಅವರ ಮಕ್ಕಳಿಗಾಗಿ ಅನಾಥಾಶ್ರಮವನ್ನು ಆರಂಭಿಸಿ ಅವರ ನೆಮ್ಮದಿಯ ಬದುಕಿಗೆ ದಾರಿದೀಪವಾದರು. ವಿವಾಹ ಬಾಹಿರ ಸಂಬಂಧದಿಂದ ಜನಿಸಿದ ಮಕ್ಕಳಿಗೆ ಮತ್ತು ಅನಾಥ ಮಕ್ಕಳಿಗಾಗಿ ಶಿಶುಪಾಲನಾ ಕೇಂದ್ರಗಳನ್ನು ಆರಂಭಿಸಿ, ಅವರ ಆಶ್ರಯ, ಅಕ್ಷರಕ್ಕೆ ಆಶ್ರಯದಾತೆಯಾದರು. ಸ್ವತಹ ದಂಪತಿಗಳು, ವಿಧವೆಯೊಬ್ಬಳ ಮಗುವನ್ನು ದತ್ತು ಪಡೆದು ಸಾಕಿ ಸಲಹಿ ವೈದ್ಯಕೀಯ ಶಿಕ್ಷಣ ಕೊಡಿಸಿ ಇವರ ಸಾಮಾಜಿಕ ಕಾರ್ಯದ ಪ್ರತಿರೂಪವಾಗಿ ಯಶವಂತನನ್ನು ಬೆಳೆಸಿದರು.

ಸುತ್ತಲಿನ ಗ್ರಾಮಸ್ಥರ ಕುಡಿಯುವ ನೀರಿನ ಬವಣೆ ನೀಗಲು, ಮನೆಯ ಮುಂದೆ ನೀರಿನ ತೊಟ್ಟಿಗಳನ್ನು, ಸಾರ್ವಜನಿಕರಿಗಾಗಿ ತೆರೆದರು. ಜ್ಯೋತಿ ಬಾಪುಲೆ ಅವರು ಸಾಮಾಜಿಕ ಕಾರ್ಯದ ಕೇಂದ್ರವಾಗಿ "ಸತ್ಯಶೋಧಕ ಸಮಾಜ"ವನ್ನು ಸ್ಥಾಪಿಸಿದ್ದರು. ಸಾವಿತ್ರಿ ಅವರು ಕಾವ್ಯಪುಲೆ, ಭವನಕಾಶಿ, ಸುಭೋಧ ರತ್ನಾಕರ, ಜ್ಯೋತಿ ಬಾಪುಲೆ ಭಾಷಣಗಳ ಸಂಗ್ರಹ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಪತಿಯ ನಂತರ ಸತ್ಯಶೋಧಕ ಸಮಾಜ ಸಂಸ್ಥೆಯನ್ನು ಮುಂದುವರಿಸಿದರು. ಕ್ಷಾಮಪೀಡಿತ ನೆರೆಯ ಜಿಲ್ಲೆಗಳಿಗೆ ತೆರಳಿ ಸುಧಾರಣಾ ಕ್ರಮಗಳನ್ನು ಕೈಗೊಂಡರು. ಮಗ ಯಶವಂತ ಇವರ ಎಲ್ಲಾ ಕಾರ್ಯಗಳಲ್ಲಿ ಜೊತೆಯಾಗಿದ್ದನು. ಸತಾರ ಜಿಲ್ಲೆಯಲ್ಲಿ 1897ರಲ್ಲಿ ಪ್ರೇಗ್ ಮಾರಿ ಹಬ್ಬಿದ್ದಾಗ, ರೋಗಿಗಳ ಶುಶ್ರೂಷೆ ಕಾರ್ಯದಲ್ಲಿ ತಾಯಿ ಮಗ ತೊಡಗಿದ್ದ ಸಂದರ್ಭದಲ್ಲಿ ಆ ಸಾಂಕ್ರಾಮಿಕ ರೋಗ, ಸಾವಿತ್ರಿ ಪುಲೆ ಅವರಿಗೇ ಹರಡಿ, ಅವರನ್ನೇ ಆಹುತಿ ತೆಗೆದುಕೊಂಡಿತು.

ಮಹಾರಾಷ್ಟ್ರದ ಸತಾರ ಜಿಲ್ಲೆಯ ನೈಗಾಂವ್‌ನಲ್ಲಿ 1831ರ ಜನವರಿ 3ರಂದು ಜನಿಸಿದ್ದ ಸಾವಿತ್ರಿ ಪುಲೆ ಅವರು ಭಾರತದ ಶಿಕ್ಷಣ ಜ್ಯೋತಿಯನ್ನು ಬೆಳಗಿದ ಅಪೂರ್ವ ಮಹಿಳೆಯಾಗಿದ್ದಾರೆ.



KASTURBA

continued from the previous edition...

In the earlier days of his life, Gandhiji had very specific ideas about wearing dress. At the time of bringing his entire family to South Africa, he thought it was inappropriate for the family to go to South Africa in the Kathiawadi dress (traditional dress of Gandhiji's native place). He wanted the family members in European attire. He made sure that his sons wore a jacket and trousers. He bought Parsi Saris for Ba. He also forced everyone to wear shoes and socks. The boys and Ba were not used to wear shoes. They found it very difficult to adjust. But everyone had to change the way they dressed. Gandhiji even introduced a modern dining in the house. A dining table, chairs, spoons, forks, knives, etc. made entry into their kitchen. It was very difficult for Kasturba to adapt to these changes.

Meanwhile, Gandhiji's idea of family became more and more inclusive. People from various countries, communities and castes with different cultural habits came to his house and became like his family members. It was Ba's cooperation that made it possible. She took care of many people and satisfied their needs. Gandhiji had a successful law practice. His annual income was 75000£. But, he decided to give all that and lead a humble life. Ba had to adjust to all those changes. Gradually, Gandhiji became more and more involved with social issues. Nevertheless, he strictly adhered to his principles. One can imagine the mental and physical hardships Kasturba had to endure! Gandhiji's ever evolving life of simplicity, service, restraint and sacrifice blossomed gradually to transform his life. With all these, Ba kept on adapting herself.



Further, Gandhiji's public life was becoming more and more extensive. Simultaneously, his own personal life was changing at a great pace. Gradually, Kasturba's life became one with Gandhiji's new life. In South Africa, Bapu faced many life-threatening attacks. He was told that it was not safe for him to move around alone. Many of his colleagues were willing to accompany him to ensure his safety. Bapu did not accept any help. He would say, "I cannot live in fear. Let me face these." Ba showed an exceptional courage at the time of such hardships. She would say, "Since you have taken to public life, I am prepared to face any consequences. Please do not worry about children or me. We will be fine."

As a wife, Ba regarded attending to all the needs Bapu's as her duty. By nature she was very clean and orderly. She was very keen on maintaining punctuality about Gandhiji's meals. During her last days, both Gandhiji and Ba were incarcerated in Aga khan palace. Even there, she was concerned about Gandhiji's meals and would instruct the colleagues and attendants about it. Bapu would sometimes say, "Why should we be so punctual in the jail?" then Ba would reply, "Even in jail, you remain so vigilant about your time. Then why should there be any irregularity in our meals?"

to be continued ....



Homai Vyarawalla

FIRST WOMEN PRESS PHOTOGRAPHER AMONG AWARDEES

Two years before she turns 100, Homai Vyarawalla India's first woman photo journlist, was on Tuesday named among the 32 women for the civilian Padma awards in the fields of art, culture, trade and social work, Gujarat-based Homai Vyarawalla will receive the Padma Vibhushan, the nation's second highest civilian award, in art and photography category.

Vyarawalla started her press photography career in 1938, for over a period of 35 years till 1973. She has captured World War II, India's Freedom Struggle leading up to Independence and subsequently the hectic events during the time of prime ministers Jawaharlal Nehru and Indira Gnadhi. (PTI report from New Delhi)

Courtesy : Deccan Herald Dt/ 26.01.2011

Netaji Subhash Chandra Bose

This is the special Biographical Tribute tells the eventful story of a man in our country

(Article courtecy : Readers Digest - July 1981)

Subhash Chandra Bose was one of the most celebrated freedom fighters of India. He was a charismatic influencer of the youth and earned the epithet 'Netaji' by establishing and leading the Indian National Army (INA) during India's struggle for independence. Although initially aligned with the Indian National Congress, he was ousted from the party due to his difference in ideology. He sought assistance from Nazi leadership in Germany and Imperial forces in Japan during the World War II, to overthrow the British from India. His sudden disappearance post 1945, led to surfacing of various theories, concerning the possibilities of his survival.

CHILDHOOD & EARLY LIFE

Netaji Subhash Chandra Bose was born on 23 January, 1897 in Cuttack (Orissa) to Janakinath Bose and Prabhavati Devi. Subhash was the ninth child among eight brothers and six sisters. His father, Janakinath Bose, was an affluent and successful lawyer in Cuttack and received the title of "Rai Bahadur". He later became a member of the Bengal Legislative Council.

Subhash Chandra Bose was a brilliant student. He passed his B.A. in Philosophy from the Presidency College in Calcutta. He was deeply influenced by Swami Vivekananda's teachings and was known for his patriotic zeal as a student. In an incident where Bose beat up his professor (E.F. Otten) for his racist remarks, brought him notoriety as a rebel-Indian in eyes of the government. His father wanted Netaji to become a civil servant and therefore, sent him to England to appear for the Indian Civil Service Examination. Bose was placed fourth with highest marks in English. But his urge for participating in the freedom movement was intense and in April 1921, he resigned from the coveted Indian Civil Service and came back to India. In December 1921, Bose was arrested and imprisoned for organizing a boycott of the celebrations to mark the Prince of Wales' visit to India.

During his stay in Berlin, he met and fell in love with Emily Schenkl, who was of Austrian origin. Bose and Emily were married in 1937 in a secret Hindu ceremony and Emily gave birth to a daughter Anita in 1942. Shortly after the birth of their daughter, Bose left Germany in 1943 to come back to India.

POLITICAL CAREER

Initially, Subhash Chandra Bose worked under the leadership of Chittaranjan Das, an active member of the Congress in Calcutta. It was Chittaranjan Das, who along with Motilal Nehru, left Congress and founded the Swaraj Party in 1922. Bose regarded Chittaranjan Das as his political guru. He himself started the newspaper 'Swaraj', edited Das' newspaper 'Forward' and worked as the CEO of Calcutta Municipal Corporation under Das' stint as Mayor. Subhash Chandra Bose played an important role in enlightening the students, youths and labourers of Calcutta. In his fervent wait to see India as an independent, federal and republic nation, he emerged as a charismatic and firebrand youth icon. He was admired within the congress for his great ability in organization development. He served several stints in prison for his nationalist activities during this time.

DISPUTE WITH THE CONGRESS

In 1928, during the Guwahati Session of the Congress, a difference of opinion surfaced between the old and new members of the Congress. The young leaders wanted a "complete self-rule and without any compromise' while the senior leaders were in favour of the "dominion status for India within the British rule".

The differences between moderate Gandhi and aggressive Subhash Chandra Bose swelled to irreconcilable proportions and Bose decided to resign from the party in 1939. He went on to form the Forward Bloc the same year.

Although he voiced his dislike for the British often in his correspondences, he also expressed his admiration for their structured way of life. He met with the leaders of the British Labor Party and political thinkers including Clement Attlee, Harold Laski, J.B.S. Haldane, Arthur Greenwood, G.D.H. Cole, and Sir Stafford Cripps and discussed the possibilities that an independent India might hold.



FORMATION OF THE INA

Bose vehemently opposed the Congress decision to support the British during the Second World War. With the aim to initiate a mass movement, Bose called out to Indians for their whole-hearted participation. There was tremendous response to his call "Give me blood and I will give you freedom" and the British promptly imprisoned him. In jail, he declared a hunger-srtike. When his health deteriorated, the authorities, fearing violent reactions, released him but put him under house-arrest.

In January, 1941, Subhash made a planned escape and reached Berlin, Germany via a detour through Peshawar. Germans assured him their full support in his endeavours and he gained allegiance of Japan as well. He took a perilous journey back east and reached Japan where he assumed command over 40,000 soldiers recruited from Singapore and other south East Asian regions. He called his army the 'Indian National Army' (INA) and led the same to capture the Andaman and Nicobar islands from the British and rechristened it as Shaheed and Swaraj Islands. A provisional "Azad Hind Government" started functioning in the captured territories. The INA or the Azad Hind Fauj stared for India and crossed Burma Border, and stood on Indian soil on March 18, 1944. Unfortunately, the tide of the World War turned and the Japanese and German forces surrendered which forced him to call off further advancement.

DEATH

Netaji disappeared mysteriously soon after the retreat. It is said that he went back to Singapore and met Field Marshal Hisaichi Terauchi, head of all military operations in South East Asia who arranged for him a flight to Tokyo. He boarded a Mitsubishi Ki-21 heavy bomber from Saigon Airport on August 17, 1945. The following day the bomber crashed shortly after take-off after a night halt in Taiwan. Witnesses report that Bose sustained intense third degree burns in the process. He succumbed to his injuries on Aug 18, 1945. He was cremated on August 20 in Taihoku Crematorium and his ashes were laid to rest at the Renk-ji Temple of Nichiren Buddhism in Tokyo.

Bose's comrades who were stranded in Saigon waiting to be transported never saw his body. Nor did they see any photographs of his injuries. They refused to believe that their hero was dead and hoped that he evaded detection by the British-American forces. They believed whole heartedly that it was just a matter of time that Netaji will gather up his army and conduct a march towards Delhi. Soon people began to report sighting of the hero and even Gandhi expressed his scepticism about death of Bose. Post-independence, people started to believe that Netaji had adopted an acetic life and became a Sadhu. The mysteries surrounding Bose's death took upon mythic proportions and perhaps symbolized the hope of the nation.

The government of India set up a number of committees to investigate the case. First the Figgess Report in 1946 and then the Shah Nawaz Committee in 1956, concluded that Bose had indeed died in the crash in Taiwan.

Later, the Khosla Commission (1970) concurred with the earlier reports, the reports of Justice Mukherjee Commission (2006) said, "Bose did not die in the plane crash and the ashes at Renkoji temple are not his". However, the findings were rejected by the Government of India.

In 2016, following the declassification of a report handed over by the Japanese government to the Indian Embassy in Tokyo in 1956, titled "Investigation on the cause of death and other matters of the late Subhash Chandra Bose" confirmed the Indian National Hero's death in Taiwan on August 18, 1945.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಮಾರ್ಚ್ 2020ರಲ್ಲಿ ಆಯೋಜಿಸಿರುವ ಕಾರ್ಯಕ್ರಮಗಳು

1. ಎಂ ಎಸ್ ಸಂದೀಪ್ ದತ್ತಿ ಕಾರ್ಯಕ್ರಮ
2. ಗಾಂಧೀ ಅಂಗಳದಲ್ಲಿ ಗಾಂಧೀ ಚಿಂತಕರು
3. ಕಸ್ತೂರ ಬಾ ಸಂಸ್ಮರಣೆ ಕಾರ್ಯಕ್ರಮ
4. ಜಾನಪದ ವಿಶ್ವವಿದ್ಯಾಲಯ ಗೋಟಗೋಡಿ
   ಹಾವೇರಿ ಜಿಲ್ಲೆ ಇವರ ಸಹಯೋಗದೊಂದಿಗೆ ಒಂದು ದಿನದ ವಿಚಾರ ಗೋಷ್ಠಿ
5. ರಾಜ್ಯಮಟ್ಟದ ಯುವಜನ ಸಮ್ಮೇಳನ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಮಹಾತ್ಮಾ ಗಾಂಧಿ ಅವರ ಅಹಿಂಸಾತ್ಮಕ ಸತ್ಯಾಗ್ರಹ ಮಾರ್ಗಗಳನ್ನು ಕ್ಷುಲ್ಲಕ ಹೇಳಿಕೆಗಳ ಮೂಲಕ
ಅವಮಾನಿಸಿದ ಲೋಕಸಭಾ ಸದಸ್ಯ ಅನಂತಕುಮಾರ್ ಹೆಗ್ಡೆ ಅವರ ವಿರುದ್ಧ
ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷರಾದ ವಿ.ಎನ್. ತಿಪ್ಪನಗೌಡ ಅವರ ಪ್ರತಿಕಾ ಹೇಳಿಕೆ

FREEDOM STRUGGLE

BJP DISOWNS HEGDE'S REMARKS

EXPRESS NEWS SERVICE
@Bengaluru

A red-faced BJP has disowned its controversial MP Anant Kumar Hegde's swipe at Mahatma Gandhi and the freedom movement. Hegde had termed the freedom movement as a 'drama', and said his 'blood boiled' when he read history, leading to a political storm. Hegde made these remarks at a literary event in Bengaluru on Saturday.



"We do not agree with his remarks. They are his personal views and the party won't endorse or support such statements," BJP state unit president Nalin Kumar Kateel told The New Indian Express. He said since Hegde is a Lok Sabha member, the party central leadership will issue him a notice and take appropriate action.

Sources said the BJP central leaders have taken it seriously and sought an explanation from the MP and also a report from the State unit of the party. The State unit has sent a verbatim translation of his 40-minute speech in Kannada.

Criticising the freedom struggle led by Gandhi without mentioning his name, Hegde said it was all done with the support of the British, and people who had actually fought for freedom were kept in the dark.

His remarks drew sharp criticism from the Congress and civil society.

N Tippanna Gowda, vice president of Gandhi Bhavan, said, "Hegde is not aware of our freedom struggle. How can he make such a statement about Gandhiji?" P5

Hegde unfit to continue as MP: Congress

EXPRESS NEWS SERVICE
@Bengaluru

OPPOSITION Congress and civil society members slammed BJP MP Anant Kumar Hegde for his controversial remarks terming Mahatma Gandhi's freedom struggle as a 'drama.'

While the Congress demanded that the Lok Sabha Speaker declare him as unfit to continue as MP, the civil society members too have demanded action against him. Meanwhile, the BJP has disowned its MP's remarks.

In a letter to the LS Speaker, Congress leader and Supreme Court advocate Brijesh Kalappa stated that in the past Hegde had made several controversial remarks and he was not fit to continue as the MP.

"A member of parliament who has taken oath of the Constitution of India cannot make such vituperative statements. It is not only an insult to the Constitution but also an insult to the Parliament of which he is a member. No right-thinking citizen with proper faculties can utter such statements which go against the foundation of India and its freedom struggle, which every Indian feels proud of," he stated. He urged the Speaker to declare Uttara Kannada seat vacant warranting election.


N Tippanna Gowda, vice president of Gandhi Bhavan, said it is very unfortunate that the BJP leader made such remarks about Mahatma Gandhi. "He is not aware of our freedom struggle. How can he make such a statement about Gandhiji? It is not enough to remove him from the Lok Sabha membership, but action should also be taken against him for making such remarks," he said.



Congress workers stage a protest at Congress Bhavan in Bengaluru on Monday against BJP MP Anant Kumar Hegde for his remarks on the freedom struggle

"Such statements clearly show that the BJP leaders do not have respect for Mahatma Gandhi," said Abilash from the Gram Seva Sangh. "On one hand they talk about respect for Gandhi and they also issue such statements. If they (senior leaders) are serious about it, let them take action against him (Hegde)," he added.

Indian Express : 05.02.2020



ಗಾಂಧಿ ಭವನದ ಕಾರ್ಯಕ್ರಮಗಳು

1. ರಾ.ಸೇ.ಯೋ, ಕರ್ನಾಟಕ ಸರ್ಕಾರ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಶೇಷಾದ್ರಿಪುರಂ ಕಾಲೇಜು ವತಿಯಿಂದ ದಿ.18.01.2020ರಂದು "ಸದೃಢ ಭಾರತ ಸೈಕಲ್ ಜಾಥ" ಕಾರ್ಯಕ್ರಮವನ್ನು ಗಾಂಧಿ ಭವನದಿಂದ ಪ್ರಾರಂಭಿಸಲಾಯಿತು. ಕಾರ್ಯಕ್ರಮದಲ್ಲಿ ಡಾ. ವೂಡೇ ಪಿ. ಕೃಷ್ಣ, ಡಾ. ಗಣನಾಥಶೆಟ್ಟಿ ಎಕ್ಕಾರು ಮತ್ತು ಶ್ರೀಮತಿ ಇಂದಿರಾ ಕೃಷ್ಣಪ್ಪ ಇವರು ಹಸಿರು ನಿಶಾನೆ ತೋರುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು.

2. ದಿ.18.01.2020ರಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾ.ಸೇ.ಯೋ. ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಇವರ ಸಂಯುಕ್ತಾಶ್ರಯದಲ್ಲಿ ಸ್ವಾಮಿ ವಿವೇಕಾನಂದ ಅವರ ಜನ್ಮ ದಿನಾಚರಣೆ ಪ್ರಯುಕ್ತ ರಾಜ್ಯ ಮಟ್ಟದ ಸ್ವಾಮಿ ವಿವೇಕಾನಂದ ಅಧ್ಯಯನ ಶಿಬಿರ' ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಕಲ್ಪನ ಜಿ. ಅಪರ ಮುಖ್ಯ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಅಧ್ಯಕ್ಷತೆಯನ್ನು ಗಾಂಧಿ ಭವನದ ಕಾರ್ಯದರ್ಶಿಗಳಾದ ಇಂದಿರಾ ಕೃಷ್ಣಪ್ಪ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ಗಣನಾಥಶೆಟ್ಟಿ ಎಕ್ಕಾರು ಅವರಿದ್ದರು. ದಿಶಾ ಭಾರತ್ ಸಂಸ್ಥೆಯವರು, ಸ್ವಾಮಿ ವಿವೇಕಾನಂದ ಒಂದು ಶಾಶ್ವತ ಪ್ರೇರಣೆ ಮತ್ತು ವಿದ್ಯಾರ್ಥಿಗಳ ಸಾಮಾಜಿಕ ಜವಾಬ್ದಾರಿ ಕುರಿತು ಪ್ರಾತ್ಯಕ್ಷತೆ ಮತ್ತು ಸಂವಹನ ಮತ್ತು ಚರ್ಚೆಯ ಮೂಲಕ ತರಬೇತಿ ನೀಡಿದರು. ಮಧ್ಯಾಹ್ನದ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ವೂಡೇ ಪಿ. ಕೃಷ್ಣ, ಗಾಂಧಿ ಭವನದ ಅಧ್ಯಕ್ಷರು ವಹಿಸಿದ್ದರು. ತುಮಕೂರು ರಾಮಕೃಷ್ಣ ಆಶ್ರಮದ ಶ್ರೀ ವಿರೇಶಾನಂದ ಸರಸ್ವತಿ ಸ್ವಾಮಿಗಳು ಸಮಾರೋಪ ನುಡಿಗಳನ್ನಾಡಿದರು. ಗಾಂಧಿ ಭವನದ ಉಪಾಧ್ಯಕ್ಷರಾದ ವಿ.ಎನ್. ತಿಪ್ಪನಗೌಡ ಅವರು ಮುಖ್ಯ ಅತಿಥಿಗಳಾಗಿದ್ದರು.

3. ವಿಶ್ವವಿದ್ಯಾಲಯ ಮಟ್ಟದ ಶ್ರಮದಾನ ಶಿಬಿರ ಕಾರ್ಯಕ್ರಮವನ್ನು ವಿಜಯಪುರದಲ್ಲಿ ಜನವರಿ 23, 2020ರಂದು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರೊ. ಟಿ.ಡಿ. ಕೆಂಪರಾಜು, ಕುಲಪತಿಗಳು, ಬೆಂಗಳೂರು ಉತ್ತರ ವಿ.ವಿ. ಅವರು ವಹಿಸಿದ್ದರು. ಅಧ್ಯಕ್ಷತೆಯನ್ನು ಎಂ. ಸತೀಶ್ ಕುಮಾರ್, ಮಾಜಿ ಅಧ್ಯಕ್ಷರು, ಪುರಸಭೆ, ವಿಜಯಪುರ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಇಂದಿರಾ ಕೃಷ್ಣಪ್ಪ, ಗೌ. ಕಾರ್ಯದರ್ಶಿಗಳು ಮತ್ತು ರಾ.ಸೇ.ಯೋ.ಯ ಡಾ. ಪೂರ್ಣಿಮಾ ಜೋಗಿ, ಶ್ರೀ ಕಾರಳ್ಳಿ ಶ್ರೀನಿವಾಸ್, ಡಾ. ಎನ್. ನಾಗರಾಜ, ಡಾ. ವಿ. ಪ್ರಶಾಂತ್ ಆಗಮಿಸಿದ್ದರು. ದಿ. 24.1.2020ರ ಸಮಾರೋಪದಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಶಿಬಿರದಲ್ಲಿ ಪಾಲ್ಗಂಡವರಿಗೆ ಪ್ರಶಸ್ತಿ, ಪ್ರತಿಭಾ ಪುರಸ್ಕಾರ, ಪ್ರಶಸ್ತಿ ಪತ್ರ ವಿತರಣೆ ಮಾಡಲಾಯಿತು. ದಿ. 24.1.2020ರಂದು ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲಾ ಆವರಣ ಮತ್ತು ದೇವಸ್ಥಾನದ ಆವರಣ್ಣ ಸುಗುಟೂರು ಗ್ರಾಮದಲ್ಲಿ ನೈರ್ಮಲ್ಯ ವ್ಯವಸ್ಥೆ ಶುಚಿತ್ವ, ಶ್ರಮದಾನವನ್ನೂ ಶಿಬಿರಾರ್ಥಿಗಳು ಮಾಡಿದ್ದರು.

4. ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ರಾಸೇಯೋ ಅರಕಲಗೂಡು ವರದರಾಜುಲು ಕಾಂತಮ್ಮ ಮಹಿಳಾ ಕಾಲೇಜು ಮತ್ತು ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ದಿ.8.02.2020ರಂದು ಎ.ವಿ.ಕೆ. ಮಹಿಳಾ ಕಾಲೇಜು, ಹಾಸನದಲ್ಲಿ ಸರ್ದಾರ್ ವೆಂಕಟರಾಮಯ್ಯ ಸಂಸ್ಮರಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಅಶೋಕ್ ಹಾರನಹಳ್ಳಿ ಅವರು, ಅಧ್ಯಕ್ಷತೆಯನ್ನು ಬಿ.ಆರ್. ಗುರುದೇವ್ ಅವರು, ಪ್ರಾಸ್ತಾವಿಕ ನುಡಿಗಳನ್ನು ಶ್ರೀಮತಿ ಇಂದಿರಾ ಕೃಷ್ಣಪ್ಪ, ಗೌ. ಕಾರ್ಯದರ್ಶಿ, ಕ.ಗಾಂ.ಸ್ಮಾ.ನಿ, ಮಾಡ್ದರು. ದತ್ತಿ ಉಪನ್ಯಾಸವನ್ನು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ನೆರವೇರಿಸಿದ್ದರು. ಮುಖ್ಯ ಅತಿಥಿಗಳಾಗಿ ವಿ.ಎನ್. ತಿಪ್ಪನಗೌಡ, ಆರ್.ಟಿ. ದ್ಯಾವೇಗೌಡ, ಆರ್. ಶೇಷಗಿರಿ, ಡಾ. ಡಿ.ಸಿ. ಅರವಿಂದ, ಹೆಚ್.ಪಿ. ನಾಗೇಂದ್ರಯ್ಯ ಡಾ. ಆಶಾಲತ ಯೋಗಿಶ್ವರ್, ಪ್ರಾಂಶುಪಾಲರು ಭಾಗವಹಿಸಿದ್ದರು.

5. ರಾ.ಸೇ.ಯೋ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಶೇಷಾದ್ರಿಪುರಂ ಕಾಲೇಜು ರಾಸೇಯೋ ವತಿಯಿಂದ ದಿ.10.02.2020ರಂದು ಶೇಷಾದ್ರಿಪುರಂ ಕಾಲೇಜಿನಿಂದ "ಅರಣ್ಯ ರಕ್ಷಿಸಿ ಜೀವ ಉಳಿಸಿ" ಜಾಗೃತಿ ಅಭಿಯಾನ ಸೈಕಲ್ ಜಾಥಾ – ಬೆಂಗಳೂರಿನಿಂದ ನಾಗರಹೊಳೆವರೆಗೆ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಡಾ. ವೂಡೇ ಪಿ. ಕೃಷ್ಣ, ಡಾ. ಗಣನಾಥಶೆಟ್ಟಿ ಎಕ್ಕಾರು ಮತ್ತು ಡಾ. ಪೂರ್ಣಿಮಾ ಜೋಗಿ, ಶ್ರೀಮತಿ ಇಂದಿರಾ ಕೃಷ್ಣಪ್ಪ, ಪ್ರೊ. ಪ್ರತಾಪ್ ಲಿಂಗಯ್ಯ, ರಾಸೇಯೋ ಕಾರ್ಯಕ್ರಮ ಅಧಿಕಾರಿ ಮತ್ತು ಕಾಲೇಜಿನ ಅಧ್ಯಾಪಕ ಬಳಗದವರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು

6. ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಬೆಂಗಳೂರು, ರಾಷ್ಟೀಯ ಸೇವಾ ಯೋಜನೆ ಯುವಸಬಲೀಕರಣ ಇಲಾಖೆ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಾರ್ವಜನಿಕ ಶಿಕ್ಷಣ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ಸರ್ಕಾರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಸಂಯುಕ್ತ ಸಂಘ, ಗಾಂಧೀ ಶಾಂತಿ ಪ್ರತಿಷ್ಠಾನ, ಗಾಂಧೀ ಅಧ್ಯಯನ ಕೇಂದ್ರಗಳು ಶೇಷಾದ್ರಿಪುರಂ ಶಿಕ್ಷಣ ದತ್ತಿ ಮತ್ತು ಹುತಾತ್ಮ ಮೈಲಾರ ಮಹಾದೇವ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಹಾವೇರಿ ಸಂಯುಕ್ತಾಶ್ರಯದಲ್ಲಿ ಬಾ–ಬಾಪು 150ನೇ ಜನ್ಮ ವರ್ಷಾಚರಣೆ ಸರ್ವೋದಯ ದಿನಾಚರಣೆ, ಸದ್ಭಾವನಾ ಪಾದಯಾತ್ರೆ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಾಗಾರ ಮತ್ತು ಗಾಂಧಿ ಚಿಂತಕರೊಂದಿಗೆ ಸಂವಾದ, ಪುಸ್ತಕ ಬಿಡುಗಡೆ, ಗಾಂಧಿ ಸೇವಾಕರ್ತರಿಗೆ, ಚಿಂತಕರಿಗೆ ಸನ್ಮಾನ, ಜಯಶ್ರೀ ಟ್ರಸ್ಟ್ ದತಿ ಪ್ರಶಸ್ತಿ ಪ್ರಧಾನ, ಗಾಂಧಿ ಪ್ರಬಂಧ ಸ್ಪರ್ಧೆ, ವಿಜೇತರಿಗೆ ಬಹುಮಾನ, ವಿದ್ಯಾರ್ಥಿಗಳಿಗೆ ನೆರವು ಕಾರ್ಯಕ್ರಮವನ್ನು ದಿ 30–01–2020 ಗುರುವಾರ, ಗಾಂಧಿ ಭವನದಲ್ಲಿ ಆಯೋಜಿಸಲಾಗಿತ್ತು.



ದಿ. 26.01.2020ರಂದು ಗಣರಾಜ್ಯೋತ್ಸವದ ಅಂಗವಾಗಿ ಗಾಂಧಿ ಭವನದಲ್ಲಿ ಧ್ವಜಾರೋಹಣ ನೇರವೇರಿಸಲಾಯಿತು ಚಿತ್ರದಲ್ಲಿ ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಹಾಗೂ ಗಾಂಧಿ ಭವನದ ಸಿಬ್ಬಂದಿವರ್ಗ



ದಿ. 30.01.2020ರಂದು ಆನಂದರಾವ್ ವೃತ್ತದ ಗಾಂಧಿ ಪ್ರತಿಮೆಯಿಂದ, ಗಣ್ಯರು, ವಿದ್ಯಾರ್ಥಿಗಳು ಮತ್ತು ಗಾಂಧಿ ಭವನದ ಸದಸ್ಯರು, ರಾಸೇಯೋ ಕಾರ್ಯಕರ್ತರು ಪಾದಯಾತ್ರೆ ಕೈಗೊಂಡಾಗ



ಸರ್ವೋದಯದ ದಿನಾಚರಣೆ ದಿ. 30.01.2020ರಂದು ಹಿರಿಯ ಗಾಂಧಿವಾದಿ ಸರ್ವೋದಯ ಕಾರ್ಯಕರ್ತ ನಾಮದೇವ ಶೆಣೈ ಮತ್ತು ಶಂಕರ ಉತ್ತೂರು ಮತ್ತು ಸುಶ್ರೀ ಚನ್ನಮ್ಮ ಹಳ್ಳೀಕೇರಿ, ಪಾಟೀಲ್ ಪುಟ್ಟಪ್ಪ ಹಾಗೂ ಜಯಶ್ರೀ ಟ್ರಸ್ಟ್ ಪ್ರಶಸ್ತಿ ಪುರಸ್ಕೃತರಾದ ಜಗದೀಶ್ ಕೊಪ್ಪ ಅವರನ್ನು ಗೌರವಿಸಲಾಯಿತು.



ಪ್ರಾಥಮಿಕ ಪಾಠಶಾಲೆ ಆವರಣ ಸುಗಟೂರು ಶ್ರಮದಾನದಲ್ಲಿ ವಿದ್ಯಾರ್ಥಿಗಳು



ಸರ್ವೋದಯದ ದಿನದ ಅಂಗವಾಗಿ ಸದ್ಭಾವನಾ ಪಾದಯಾತ್ರೆಯಲ್ಲಿ ಗಾಂಧಿ ಭವನದ ಅಧ್ಯಕ್ಷರು, ಕಾರ್ಯದರ್ಶಿಗಳು, ಸದಸ್ಯರು, ಸರ್ವೋದಯ ಕಾರ್ಯಕರ್ತರು, ವಿದ್ಯಾರ್ಥಿಗಳು ಮತ್ತು ಶ್ರೀ ವೇಮಗಲ್ ಸೋಮಶೇಖರ್ ಅವರು ಗಾಂಧಿ ಉಡುಪಿನಲ್ಲಿ



ಸರ್ದಾರ್ ವೆಂಕಟರಾಮಯ್ಯ ದತ್ತಿ ಕಾರ್ಯಕ್ರಮವನ್ನು ದಿ. 08.02.2020ರಮದು ಎ.ವಿ.ಕೆ. ಮಹಿಳಾ ಕಾಲೇಜು ಹಾಸನದಲ್ಲಿ ಆಯೋಜಿಸಲಾಗಿತ್ತು. ಡಾ. ಮಲ್ಲೇಪುರಂ ಜಿ. ವೆಂಕಟೇಶ್ ದತ್ತಿ ಉಪನ್ಯಾಸ ನೀಡಿದರು. ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಉಪಾಧ್ಯಕ್ಷ ವಿ.ಎನ್. ತಿಪ್ಪನಗೌಡ ಉಪಸ್ಥಿತರಿದ್ದರು. ಶ್ರೀ ಅಶೋಕ್ ಹಾರನಹಳ್ಳಿ ವಿಶ್ರಾಂತ ಅಡ್ವೋಕೇಟ್ ಜನರಲ್ ಹಾಗೂ ಅಧ್ಯಕ್ಷರು ಮಲೆನಾಡು ತಾಂತ್ರಿಕ ವಿಶ್ವವಿದ್ಯಾಲಯ. ಬಿಆರ್ ಗುರುದೇವ್. ಡಾ.ಎಂ.ಬಿ ಆಶಾಲತಾ ಮತ್ತು ಕಾಲೇಜಿನ ಆಡಳಿತ ಮಂಡಲಿ ಸದಸ್ಯರು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಜನವರಿ 23 –24, 2020ರಂದು ಸುಗಟೂರು, ವಿಜಯಪುರ, ಚಿಕ್ಕಬಳ್ಳಾಪುರದಲ್ಲಿ ವಿಶ್ವವಿದ್ಯಾಲಯ ಮಟ್ಟದ ಶ್ರಮದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರದ ಮಾನ್ಯ ಕುಲಪತಿಗಳಾದ ಪ್ರೊ. ಟಿ.ಡಿ. ಕೆಂಪರಾಜು ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಇಂದಿರಾ ಕೃಷ್ಣಪ್ಪ, ಡಾ. ಪೂರ್ಣಿಮಾ ಜೋಗಿ, ಡಾ. ವಿ. ಪ್ರಶಾಂತ್, ಡಾ. ಎನ್. ನಾಗರಾಜ್, ಶ್ರೀನಿವಾಸ್, ಎಂ. ಸತೀಸ್ ಕುಮಾರ್, ಎಸ್. ಕೃಪಾಶಂಕರ್, ಆರ್. ಶೆಟ್ಟಿನಾಯಕ್ ಭಾಗವಹಿಸಿದ್ದರು.



ಪತ್ರಿಕಾ ವರದಿಗಳು



ಗಾಂಧಿ ಎಂದರೆ ಜೀವನ ವಿಧಾನ

ಗಾಂಧಿ ಎಂದರೆ ಕೇವಲ ವ್ಯಕ್ತಿಯಲ್ಲ, ಶಕ್ತಿಯೂ ಅಲ್ಲ. ಅದೊಂದು ಜೀವನ ವಿಧಾನ ಎಂದು ಲೇಖಕ ಎನ್. ಜಗದೀಶ್ ಕೊಪ್ಪ ಅಭಿಪ್ರಾಯಪಟ್ಟರು. ಗಾಂಧಿ ಭವನದಲ್ಲಿ ಗುರುವಾರ ಆಯೋಜಿಸಿದ್ದ ಸರ್ವೋದಯ ದಿನಾಚರಣೆ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಾಗಾರ ಮತ್ತು ಗಾಂಧಿ ಚಿಂತಕರೊಂದಿಗೆ ಸಂವಾದದಲ್ಲಿ ಅವರು ಮಾತನಾಡಿದರು.

'ಹಿರಿಯರು ಗಾಂಧಿಯನ್ನು ಆರಾಧನೆಯ ನೆಲೆಯಲ್ಲಿ ನೋಡಿಕೊಂಡು ಬಂದಿದ್ದು ನಮ್ಮ ತಲೆಮಾರಿನವರು ಗಾಂಧಿಯನ್ನು ಮುಂದಿನ ಪೀಳಿಗೆಗೆ ಹೇಗೆ ತಲುಪಿಸುವ ಬಗ್ಗೆ ಆಲೋಚನೆ ನಡೆಸಿಕೊಂಡು ಬಂದಿದ್ದೇವೆ' ಎಂದರು.

"ಕುಟುಂಬದೊಳಗೆ ಸಾಕಷ್ಟು ನೋವಿದ್ದರೂ, ಅದನ್ನು ಹೊರ ಜಗತ್ತಿಗೆ ತೋರಿಸಿಕೊಳ್ಳದೆ ಇಡೀ ಸ್ವಾತಂತ್ರ್ಯ ಹೋರಾಟದ ಭಾರವನ್ನು ಗಾಂಧಿ ಹೊತ್ತಿದ್ದರು. ಅವರನ್ನು ನಾವು ವಿವಿಧ ಆಯಾಮಗಳಲ್ಲಿ ಅರ್ಥ ಮಾಡಿಕೊಳ್ಳಬೇಕಿದೆ. ಆಗ ಮಾತ್ರ ಈವರೆಗೆ ನಮಗೆ ದಕ್ಕದ ಮಹಾತ್ಮ ದಕ್ಕುತ್ತಾರೆ' ಎಂದು ಹೇಳಿದರು.

ಮೈಸೂರಿನ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂತಿವ್ರತಾನಂದ ಮಾತನಾಡಿ, 'ಶಿಕ್ಷಣ ಎಂಬುದು ಸಾಧನೆ ಮತ್ತು ಸಾಧನ ಎಂದು ಗಾಂಧೀಜಿ ಹೇಳುತ್ತಿದ್ದರು. ಆದರೆ, ಇಂದಿನ ಶಿಕ್ಷಣ ಹೊಟ್ಟೆ ಬಟ್ಟೆಗೆ ಸೀಮಿತವಾಗಿದೆ. ಗಾಂಧೀಜಿ ಬದುಕಿನ ಕುರಿತು 100 ಸಂಪುಟಗಳಿವೆ. ಅದರಲ್ಲಿ ಒಂದು ಸಂಪುಟವನ್ನಾದರೂ ಓದುವ ಪ್ರಯತ್ನವನ್ನು ನಾವೆಲ್ಲರೂ ಮಾಡುತ್ತಿಲ್ಲ. ಉತ್ತಮ ಜೀವನ ರೂಪಿಸಿಕೊಳ್ಳಲು ಇಂತಹ ಜೀವನವನ್ನು ಓದಬೇಕು. ಗಾಂಧೀಜಿ ಅವರ ಒಂದೆರಡು ಸಂದೇಶಗಳನ್ನು ನಾವು ಅಳವಡಿಸಿಕೊಂಡರೆ ಸಾರ್ಥಕ ಬದುಕು ನಡೆಸಬಹುದು' ಎಂದು ಹೇಳಿದರು.

ಬಾಪು ಪ್ರಪಂಚ ಸಂಚಿಕೆ ಜತೆಗೆ 5 ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಗಾಂಧಿ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕೃಪೆ : ಪ್ರಜಾವಾಣಿ – 31.02.2020

ಶಿಕ್ಷಣದ ಮೌಲ್ಯ ನಷ್ಟಕ್ಕೆ ಕಳವಳ

ಶಿಕ್ಷಣ ವ್ಯಕ್ತಿಯನ್ನು ಸರ್ವತೋಮುಖ ಅಭಿವೃದ್ಧಿಗೆ ರೂಪಿಸುವ ಸಾಧನವಾಗಿದ್ದು ಇಂದು ಮೌಲ್ಯವನ್ನು ಕಳೆದುಕೊಳ್ಳುತ್ತಿದೆ ಎಂದು ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂತಿವ್ರತಾನಂದ ಕಳವಳ ವ್ಯಕ್ತಪಡಿಸಿದರು.

ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಗಾಂದಿ ಭವನದಲ್ಲಿ ಆಯೋಜಿಸಿದ್ದ ಸರ್ವೋದಯ ದಿನಾಚರಣೆ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಾಗಾರ ಮತ್ತು ಗಾಂಧಿ ಚಿಂತಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಣ ಎಂಬುದು ವ್ಯಕ್ತಿಯ ವ್ಯಕ್ತಿತ್ವ ರೂಪಿಸುವ ಅಸ್ತ್ರ ಎಂದು ಮಹಾತ್ಮ ಗಾಂಧಿ ಹೇಳಿದ್ದಾರೆ. ಆದರೆ ಈಗ ಶಿಕ್ಷಣ ಕೇವಲ ಅನ್ನ, ಬಟ್ಟೆ ಪಡೆಯುವ ಸಾಧನವಾಗಿದೆ. ಆದರೆ ನಿಜವಾದ ಶಿಕ್ಷಣ ವ್ಯಕ್ತಿಯನ್ನು ಮಾನಸಿಕ, ಬೌದ್ಧಿಕ, ಆಧ್ಯಾತ್ಮಿಕವಾಗಿ ರೂಪಿಸುವ ಒಂದು ಶಕ್ತಿ. ನಾವು ಪ್ರಜ್ಞಾವಂತ ನಾಗರಿಕರಾಗಬೇಕಾದರೆ ಗಾಂಧೀಜಿ ಜೀವನದ ಮೌಲ್ಯ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಬೇಕು. ಹಿರಿಯರಲ್ಲಿ ಆನಂದದ ಕಣ್ಣೀರು ತರಿಸುವಂತಹ ಮೌಲ್ಯಯುತ ಶಿಕ್ಷಣವನ್ನು ಕಲಿಯಬೇಕು ಎಂದು ಸಲಹೆ ನೀಡಿದರು.

5ಜಿ ತಂತ್ರಜ್ಞಾನ ಇಂದು ಜಗತ್ತಿನಲ್ಲಿ ಸುಲಭವಾಗಿ ಕೈಗೆಟುಕುತ್ತಿದೆ. ಇದರಿಂದ ಮಾನಸಿಕ, ನೈತಿಕ ಮತ್ತು ಭಾವನಾತ್ಮಕವಾಗಿ ಶಕ್ತಿ ಕುಂದುತ್ತಿದೆ. ತುಂಡು ಬಟ್ಟೆಯನ್ನುಟ್ಟು ಮಹಾತ್ಮ ಗಾಂಧಿ ಇಡೀ ಜಗತ್ತನ್ನು ಸಂಚರಿಸಿ ಸ್ವಾತಂತ್ರ್ಯ ಆಂದೋಲನ ನಡೆಸುವುದರ ಜೊತೆಗೆ ಕುಟುಂಬವನ್ನು ನಿರ್ವಹಿಸಿದರು. ಅವರ ಜೀವನ ಮೌಲ್ಯ ಮತ್ತು ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಗಾಂಧೀಜಿ ಕುರಿತ ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಯಿತು.

ಕೃಪೆ : ಸಂಯುಕ್ತ ಕರ್ನಾಟಕ – 31.02.2020

ಬಾಪು ಪ್ರಪಂಚ


ಗಾಂಧಿಜೀ ಅವರ ಜೀವನ, ತತ್ವ ಸಿದ್ಧಾಂತಗಳನ್ನು ಮತ್ತು ಅವರ ಕುರಿತಾದ ಕಾರ್ಯಕ್ರಮಗಳು ಮತ್ತು ಕಾರ್ಯಚಟುವಟಿಕೆಗಳನ್ನು ಓದುಗರಿಗೆ ಪರಿಚಯ ಮಾಡಿಕೊಡುವುದು ಬಾಪು ಪ್ರಪಂಚ ಮಾಸ ಪತ್ರಿಕೆಯ ಮುಖ್ಯ ಆಶಯವಾಗಿದೆ. ಗಾಂಧೀಜಿ ಅವರ ಕುರಿತಾದ ವಿಚಾರ ಸಂಕಿರಣ, ಸಂವಾದ, ಚರ್ಚೆ, ವಿಶೇಷ ಶಿಬಿರಗಳು, ಕಾರ್ಯಚಟುವಟಿಕೆಗಳ ಮೂಲಕ ಗಾಂಧಿಜೀ ಅವರ ಸಿದ್ಧಾಂತಗಳ ವಿಶ್ವಮಟ್ಟದ ಅನುಸಂಧಾನಗಳನ್ನು ಯುವಜನತೆಗೆ ನೀಡುವುದು ಬಾಪು ಪ್ರಪಂಚದ ಉದ್ದೇಶವಾಗಿದೆ. ಇಂದಿನ ಯುವ ಜನತೆ, ಗಾಂಧಿಜೀ ಅವರ ಜೀವನ ಮತ್ತು ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲಿ ಎಂಬ ಮಹದಾಸೆಯನ್ನು ಪತ್ರಿಕೆ ಹೊಂದಿದೆ.

- ಓದುಗರು ತಮ್ಮ ಅಭಿಪ್ರಾಯಗಳು, ಸಲಹೆಗಳು, ಸೂಚನೆಗಳನ್ನು ಪತ್ರಗಳ ಮುಖಾಂತರ ಅಥವಾ ಇಮೇಲ್ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಬಹುದು.
  ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-56001, ದೂರವಾಣಿ : 080-22261967, 9738605799, gandhibhavanbangalore@gmail.com. gandhibhavanabengaluru@gmail.com ನೀಡಬಹುದು.
- ಗಾಂಧೀಜಿ ಅವರ ವಿಚಾರಗಳ ಕುರಿತ ಲೇಖನಗಳು, ವಿಶೇಷ ಸಂಗತಿಗಳು, ಚಿತ್ರಗಳು ಇತ್ಯಾದಿಗಳನ್ನು ಓದಗರು ನೀಡಬಹುದು. ಅವುಗಳನ್ನು ಪ್ರಕಟಿಸುವ ಆಯ್ಕೆ ಸಂಪಾದಕರದ್ದಾಗಿರುತ್ತದೆ.
- ಲೇಖನಗಳಲ್ಲಿ ಅಳವಡಿಸಬಹುದಾದ ಚಿತ್ರಗಳನ್ನೂ ಕಳುಹಿಸಬಹುದು ಹಾಗೂ ನೆರವು ಪಡೆದ ಆಕರಗಳನ್ನು ಸೂಚಿಸುವುದು. ಸಂಪರ್ಕಕ್ಕಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು, ಪೂರ್ಣ ವಿಳಾಸವನ್ನು ಕಡ್ಡಾಯವಾಗಿ ಕಳುಹಿಸುವುದು
- **ಜಾಹೀರಾತುಗಳಿಗೆ ಸಂಪರ್ಕ : ಸಹ ಕಾರ್ಯದರ್ಶಿ : 9738605799**
  ಕಾರ್ಯನಿರ್ವಹಣಾಧಿಕಾರಿ : 9980307286

BAPU PRAPANCHA

Bapu Prapancha magazine is published with an objective to spread the life, thoughts, and principles of Gandhi. Seminars, symposia, discussions, camps, and various special activities conducted and internaitonal level researches done reflecting ideas and thoughts are published in this magazine. And this is intended to create to an urge among the youth and students to take him as an ideal in their life.


- Readers are requested to give their opinions, suggestions and viewpoints to the following address and email. Karnataka Gandhi Smaraka Nidhi, Gandhi Bhavana, Kumara Park East, Bengaluru-56001, Ph: 080-22261967, 9738605799;
  gandhibhavanbangalore@gmail.com; gandhibhavanbengaluru@gmail.com.
- Readers are also requested to send articles, special events, important anecdotes or any other information related to Gandhi and Gandhian thoughts. Responsibility to select such matter solely lies with the editor of the magazine.
- Readers shall also providephotos or illustration related their articles, if an . They shall also mention the references, if any, and send their complete address and phone numbers (mandatory).
- For advertisements please contact: Joint Secretary, Ph: 9738605799/ Executive Officer : 9980307286



Date : Sun 01, March, 2020 at 7.00 pm Jyoti Nivas College : Bengaluru

ದಿನಾಂಕ 1.3.2020ರಂದು ಬೆಂಗಳೂರಿನ ಜ್ಯೋತಿ ನಿವಾಸ್ ಕಾಲೇಜಿನಲ್ಲಿ ಸಂಜೆ 7.00 ಗಂಟೆಗೆ ದಿ. ಗ್ರೇಟ್ ಇಂಡಿಯನ್ ಥಿಯೇಟರ್ ಫೆಸ್ಟಿವಲ್ 2020ರ ಅಂಗವಾಗಿ ಕಸ್ತೂರ್‌ಬಾ ಮತ್ತು ಗಾಂಧಿ ನಡುವಿನ ಪ್ರೀತಿಯ ಕುರಿತು "ಡಿಯರೆಸ್ಟ್ ಬಾಪು" ರಂಗ ಪ್ರದರ್ಶನವನ್ನು ಆಯೋಜಿಸಲಾಗಿದೆ. ಆಸಕ್ತರು ಟಿಕೆಟುಗಳಿಗಾಗಿ ಬುಕ್ ಮೈ ಷೋ ವೆಬ್ ತಾಣಗಳಲ್ಲಿ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ 7039865272 ದೂರವಾಣಿ ಸಂಪರ್ಕಿಸುವುದು.



SALIM ALI : (12 November 1896 – 20 June 1987)

Sálim Moizuddin Abdul Ali was an Indian ornithologist and naturalist. Sometimes referred to as the "Birdman of India", Salim Ali was the first Indian to conduct systematic bird surveys across India and wrote several bird books that popularized ornithology in India. He became a key figure behind the Bombay Natural History Society after 1947.

Although recognition came late, he received several honorary doctorates and numerous awards. "Joy Gobinda Law Gold Medal" in 1953, in 1970 Sunder Lal Hora memorial Medal of the Indian National Science Academy. Honorary doctorates from the Aligarh Muslim University (1958), Delhi University (1973) and Andhra University (1978). In 1967 he became the first non-British citizen to receive the Gold Medal of the British Ornithologists' Union. In the same year, he received the J. Paul Getty Wildlife Conservation Prize consisting of a sum of $100,000, which he used as a corp us for the Salim Ali Nature Conservation Fund. In 1969 John C. Phillips memorial medal of the International Union for Conservation of Nature and Natural Resources. The USSR Academy of Medical Sciences awarded in 1973 and in the same year he was made Commander of the Netherlands Order of the Golden Ark by Prince Bernhard of the Netherlands. The Indian government decorated him with a Padma Bhushan in 1958 and the Padma Vibhushan in 1976.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಪ್ರಕಟಣೆಗಳು



Tariff rates for Advertisement in Bapu Prapancha Kannada English Monthly Magzine

Sl.no.	Particulars	Rates (Rs)
1	Half Page (Black & White)	1,000.00
2	Full Page (Black & White)	2,000.00
3	Half Page (Extra)	2,000.00
4	Full Page (Colour)	4,000.00
5	2nd Cover Page	5,000.00
6	3rd Back Cover Page	5,000.00
7	Back Cover Page	10,000.00

ಚಂದಾದಾರರಾಗಲು ಈ ಕೆಳಗಿನಂತೆ ಅರ್ಜಿಯನ್ನು ಭರ್ತಿಮಾಡಿ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು

ಹೆಸರು ______________________________

ವಿಳಾಸ ______________________________

______________________________ ನಗರ ______________

ಪಿನ್‌ಕೋಡ್ ______________ ಜಿಲ್ಲೆ ______________ ರಾಜ್ಯ ______________

ಮೊಬೈಲ್ ನಂ. ______________ ಸ್ಥಿರ ದೂರವಾಣಿ ______________

ಹೊಸದಾಗಿ ಚಂದಾದಾರರು ☐ ನವೀಕರಣ ☐

ಗೌರವ ಕಾರ್ಯದರ್ಶಿ, ಗಾಂಧಿಭವನ, ಕುಮಾರಪಾರ್ಕ್ ಪೂರ್ವ, ಬೆಂಗಳೂರು.– 560001
ಫೋನ್: 080–22261967

ಬಾಪು ಪ್ರಪಂಚ ಮಾಸಿಕ : ಚಂದಾ ವಿವರ

ಚಂದಾ ಅವಧಿ	ಚಂದಾ	ರಿಯಾಯಿತಿ ದರ	ದೊರಕುವ ಸಂಚಿಕೆಗಳು
ಬಿಡಿ ಪ್ರತಿ	20/–		1
1 ವರ್ಷಕ್ಕೆ	240/–	170	13
2 ವರ್ಷಕ್ಕೆ	480/–	400/–	26
3 ವರ್ಷಕ್ಕೆ	720/–	630/–	39

- ಚಂದಾ ಹಣವನ್ನು ಡಿಡಿ ಅಥವಾ ಆನ್‌ಲೈನ್ ಮುಖಾಂತರ ಕಾರ್ಯದರ್ಶಿ, ಗಾಂಧಿ ಭವನ ಇವರ ಹೆಸರಿನಲ್ಲಿ ಕಳುಹಿಸುವುದು
- ಬ್ಯಾಂಕ್ ಮಾಹಿತಿ ಖಾತೆ ಸಂಖ್ಯೆ 0788101000778 ಕೆನರಾ ಬ್ಯಾಂಕ್, ಮಾಧವನಗರ ಶಾಖೆ, ಬೆಂಗಳೂರು, IFSC ಸಂಖ್ಯೆ CNRB0000788
- ಚಂದಾ ಕಳುಹಿಸುವ ವಿಳಾಸ : ಕಾರ್ಯದರ್ಶಿ, ಗಾಂಧಿಭವನ, ಕುಮಾರಪಾರ್ಕ್ ಪೂರ್ವ, ಬೆಂಗಳೂರು.– 56001, ಫೋನ್: 080–22261967
  ಕಚೇರಿಯೊಡನೆ ವ್ಯವಹರಿಸುವಾಗ ಡಿಮ್ಯಾಂಡ್ ಡ್ರಾಫ್ಟ್ ಕಳುಹಿಸಿದ ದಿನಾಂಕವನ್ನು ಚಂದಾದಾರರು ನಮೂದಿಸಬೇಕು. ಯಾವುದೇ ಮಾಹಿತಿಗಾಗಿ ಸಂಪರ್ಕಿಸಿ :
  ಸಹ ಕಾರ್ಯದರ್ಶಿ : 9738605799, ಕಾರ್ಯನಿರ್ವಹಣಾಧಿಕಾರಿ : 9980307286

ಪಾವತಿ: ಬ್ಯಾಂಕಿನ ಹೆಸರು ______________ ಡಿಡಿ ಸಂಖ್ಯೆ ______________

ಮೊತ್ತ ______________ ದಿನಾಂಕ ______________

ನೆಟ್ ಬ್ಯಾಂಕ್ ವಿವರ ______________________________

ಚಂದಾದಾರರ ಹೆಸರು ಮತ್ತು ಸಹಿ

ದಿನಾಂಕ

To Suscribe please fill the below form

Name ______________________________

Address ______________________________

______________________________ City ______________

Pincode ______________ District ______________ State ______________

Mobile No. ______________ Landline ______________

New Membership ☐ Renewal ☐

Hon. Secretary, Gandhi Bhavana, Kumarapark East, Bengaluru - 560001

Bapu Prapancha Subscripation Detail

Subscription period	Subscription Amount	Discount	Issues
Single Copy	20/-		1
One year	240/-	170/-	13
Two years	480/-	400/-	26
Three years	720/-	630/-	39

- For Subscription, D/D Should be in favour of Secretary, Gandhi Bhavana, Bengaluru
- Bank Details : A/c No. 0788101000778 Canara Bank
  Madhavanagara Branch, Bengaluru, IFSC No. CNRB0000788.
- For Subscription please write to Secretary, Gandhi Bhavana, Kumarapark East Bengaluru - 560001, Ph : 080 - 22261967 with following details.
  For any comunication please contact our Assistant Secretary : 9738605799
  Executive officer : 9980307286.

Payment : Name of the Bank ______________ D/D. No. ______________

Amount ______________ Date ______________

Netbanking Detail ______________________________

Subscriber's name & Signature

Date



ಸರೋಜಿನಿ ನಾಯ್ಡು

(13ನೇ ಫೆಬ್ರುವರಿ 1879 – 2ನೇ ಮಾರ್ಚ್ 1949.)

ಸರೋಜಿನಿ ನಾಯ್ಡು "ಭಾರತದ ಕೋಗಿಲೆ" ಎನ್ನುವ ಹೆಸರಿನಿಂದಲೇ ಪ್ರಸಿದ್ಧರಾಗಿದ್ದಾರೆ. ಚಿಕ್ಕಂದಿನಿಂದಲೇ ಪ್ರಸಿದ್ಧಿ ಹೊಂದಿದ್ದ ಇವರು ಭಾರತದ ಸ್ವಾತಂತ್ರ್ಯ ಹೋರಾಟಗಾರರೂ. ಅಲ್ಲದೆ ಕವಯತ್ರಿಯು ಸಹ ಆಗಿದ್ದರು. ಇವರು ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲನೆಯ ಮಹಿಳಾ ಅಧ್ಯಕ್ಷೆಯೂ ಆಗಿದ್ದರು. ಉತ್ತರ ಪ್ರದೇಶದ ಮೊದಲನೆಯ ಮಹಿಳಾ ರಾಜ್ಯಪಾಲರಾಗಿದ್ದರು. ಇವರು ಭಾರತೀಯರ ಮತದಾನ ಹಕ್ಕಿನ ಹೋರಾಟದಲ್ಲಿ ಪ್ರಮುಖರಾಗಿದ್ದಾರೆ. ಇವರ ತಂದೆ ವಿಜ್ಞಾನಿ ಮತ್ತು ತತ್ವಜ್ಞಾನಿಗಳಾಗಿದ್ದ ಅಘೋರನಾಥ ಚಟ್ಟೋಪಾಧ್ಯಾಯ ಮತ್ತು ತಾಯಿ ಬಂಗಾಳಿ ಕವಿಯಿತ್ರಿಯಾದ ಸುಂದರಿ ದೇವಿ. ಸರೋಜಿನಿ ನಾಯ್ಡು ಅವರು, ಅವರ ತಂದೆ-ತಾಯಿಯರ ಎಂಟು ಮಕ್ಕಳಲ್ಲಿ ಮೊದಲನೆಯವರಾಗಿದ್ದರು.

ಇವರು ಮೊದಲಿಗೆ ಆಂಗ್ಲಭಾಷೆಯಲ್ಲಿ ಕವಿತೆಗಳನ್ನು ಬರೆಯಲು ಪ್ರಾರಂಭಿಸಿದರು. ಹೈದರಾಬಾದಿನ ನಿಜಾಮರು ಇವರ ಕವಿತೆಗಳಿಂದ ಸ್ಫೂರ್ತಿಗೊಂಡು ವಿದೇಶದಲ್ಲಿ ಕಲಿಯಲು ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಿದರು. 16ನೇ ವಯಸ್ಸಿನಲ್ಲಿಯೇ ಇವರು ಪ್ರಥಮವಾಗಿ ಇಂಗ್ಲೇಂಡಿನ ಕಿಂಗ್ಸ್ ಕಾಲೇಜಿನಲ್ಲಿ ತದನಂತರ ಕೇಂಬ್ರಿಡ್ಜ್‌ನ ಗಿರ್ಟನ್ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಪಡೆದರು. ಅಲ್ಲಿ ಇವರು ಆ ಕಾಲದಲ್ಲಿ ಪ್ರಸಿದ್ಧರಾಗಿದ್ದ ಆರ್ಥರ್ ಸೈಮೊನ್ಸ್ ಮತ್ತು ಎಡ್ಮಂಡ್ ಗೋಸೆಯವರನ್ನು ಭೇಟಿ ಮಾಡಿದರು.

ಗೋಸೆಯವರು ಸರೋಜಿನಿ ಅವರನ್ನು ಭಾರತದಲ್ಲಿರುವ ಬೆಟ್ಟ-ಗುಡ್ಡಗಳು, ನದಿಗಳು, ದೇವಸ್ಥಾನಗಳು, ಜನರ ಜೀವನ ಕ್ರಮ ಮುಂತಾದ ವಿಷಯಗಳನ್ನು ಮನದಲ್ಲಿಟ್ಟುಕೊಂಡು ಕವಿತೆಗಳನ್ನು ರಚಿಸಬೇಕೆಂಬ ಅಂಶಗಳನ್ನು ತಿಳಿಸಿಕೊಟ್ಟರು. ಅದರಂತೆ ಸರೋಜಿನಿ ಅವರು ಸಮಕಾಲೀನ ಇಂಡಿಯಾ ದೇಶದ ಜನರ ಜೀವನಕ್ರಮಗಳನ್ನು ತಮ್ಮ ಕವಿತೆಗಳಲ್ಲಿ ಚಿತ್ರಿಸಿದರು.

ದಿ ಗೋಲ್ಡನ್ ತ್ರೆಶೋಲ್ಡ್ (1905 The Golden Threshold), ದಿ ಬರ್ಡ್ ಆಫ್ ಟೈಮ್ (1912 The Bird of Time) ಮತ್ತು ದಿ ಬ್ರೋಕನ್ ವಿಂಗ್ (1912 The Broken Wing) ಎನ್ನುವ ಕವನ ಸಂಕಲನಗಳು ಭಾರತದ ಸಾಕಷ್ಟು ಓದುಗರನ್ನು ಮತ್ತು ಆಂಗ್ಲಭಾಷೆಯ ಕವಿಗಳನ್ನು ಆಕರ್ಷಿಸಿದವು. ಇವರಿಗೆ ಡಾ॥ ಗೋವಿಂದರಾಜು ನಾಯ್ಡು ಅವರ ಸ್ನೇಹ ಸಂಪರ್ಕ ಬೆಳೆಯಿತು.

ಇವರು ಶಿಕ್ಷಣವನ್ನು ಪೂರ್ಣಗೊಳಿಸಿ 19ನೇ ವರ್ಷದಲ್ಲಿ ಗೋವಿಂದರಾಜು ನಾಯ್ಡು ಅವರನ್ನೇ ಅಂತರ್ಜಾತಿಯ ವಿವಾಹವಾದರು. ಇದು ಇವರು ತೆಗೆದುಕೊಂಡ ಕ್ರಾಂತಿಕಾರಕ ಕ್ರಮವಾಗಿತ್ತು. ಇವರ ಈ ಪ್ರಯತ್ನಕ್ಕೆ ಇವರ ತಂದೆಯ ಸಂಪೂರ್ಣ ಉತ್ತೇಜನವಿತ್ತು. ಇವರಿಗೆ ಜಯಸೂರ್ಯ, ಪದ್ಮಿನಿ, ರಣಧೀರ್ ಮತ್ತು ಲೈಲಾಮಣಿ ಎನ್ನುವ ನಾಲ್ವರು ಮಕ್ಕಳಿದ್ದರು.

ಬಂಗಾಳದ ವಿಭಜನೆ ವಿರೋಧಿ ಹೋರಾಟದ ಮೂಲಕ 1905ರಲ್ಲಿ ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಸರೋಜಿನಿ ಅವರು ಭಾಗವಹಿಸಿದರು. ಆ ಸಮಯದಲ್ಲಿ ಇವರು ಗೋಪಾಲ್‌ಕೃಷ್ಣ ಗೋಖಲೆ, ರವೀಂದ್ರನಾಥ ಟ್ಯಾಗೂರ್, ಮಹಮದ್ ಆಲಿ ಜಿನ್ನ, ಆನಿಬೆಸೆಂಟ್, ಸಿ.ಪಿ. ರಾಮಸ್ವಾಮಿ ಐಯರ್, ಮಹಾತ್ಮ ಗಾಂಧಿ ಮತ್ತು ಜವಾಹರಲಾಲ್ ನೆಹರೂ ಅವರನ್ನು ಸಂಪರ್ಕ, ಸಂವಹನದ ವಲಯದಲ್ಲಿ ಸೇರಿದರು.

ಭಾರತದ ಮಹಿಳೆಯರು ಅಡಿಗೆಮಾಡಲು ಮಾತ್ರ ಸೀಮಿತವಾಗಿರದೆ, ಅಡಿಗೆ ಮನೆಯ ಆಚೆಗೂ ಇರುವ ಪ್ರಪಂಚವನ್ನು ನೋಡಲು ಹೊರ ಬರುವಂತೆ ಪ್ರೇರೇಪಿಸಿದರು. ಪ್ರತಿಯೊಂದು ರಾಜ್ಯಗಳಲ್ಲಿನ, ಪ್ರತಿಯೊಂದು ಜಿಲ್ಲೆಗಳಲ್ಲೂ ಸಂಚರಿಸಿ ಮಹಿಳಾ ಸ್ವಾತಂತ್ರ್ಯದ ಬಗ್ಗೆ ಹೇಳುತ್ತಾ ಮಹಿಳೆಯರು ಸ್ವ-ಗೌರವವನ್ನು ಪಡೆಯುವಂತೆ ಮಾಡಿದರು.

ಸರೋಜಿನಿ ಅವರು 1925ರಲ್ಲಿ ಕಾನ್ಪುರದಲ್ಲಿ ನಡೆದ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನದ ಅಧ್ಯಕ್ಷರಾಗಿದ್ದರು. ನಾಗರೀಕ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ಗಾಂಧೀಜಿ ಮತ್ತು ಅನೇಕ ಚಳುವಳಿಗಾರರೊಂದಿಗೆ ಜೈಲು ಶಿಕ್ಷೆ ಅನುಭವಿಸಿದರು. 1942ರಲ್ಲಿಯೂ 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಭಾಗವಹಿಸಿ ಗಾಂಧೀಜಿ ಮುಂತಾದ ನಾಯಕರೊಂದಿಗೆ 21 ತಿಂಗಳ ಕಾಲ ಜೈಲಿನಲ್ಲಿ ಕಳೆದರು.

ಇವರು ಗಾಂಧೀಜಿ ಅವರೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿದ್ದರು ಮತ್ತು ಅವರನ್ನು ಮಿಕ್ಕಿ ಮೌಸ್ ಎಂದು ಹಾಸ್ಯಧಾಟಿಯಲ್ಲಿ ಕರೆಯುತ್ತಿದ್ದರು. ಹಲವು ಪ್ರಥಮಗಳಿಗೆ ಕಾರಣಕರ್ತರಾದ ಸರೋಜಿನಿ ಅವರು 2ನೇ ಮಾರ್ಚ್ 1949ರಲ್ಲಿ ಕಾಲವಾದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ


ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು – 560001

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ

RN No: KRBIL/2019/77950

Bapu Prapancha Date of Publication : 15th February posted on 20th February at Bengaluru - 560001

Registered Reg. No. KARBIL/2019/77950 Total Pages : 28+4 Cover pages



ಡಾ. ರೆವೆರೆಂಡ್ ಮಾರ್ಟಿನ್ ಲೂಥರ್ ಕಿಂಗ್ : (ಜನವರಿ 15, 1929 – ಎಪ್ರಿಲ್ 04, 1968)
ಅಮೇರಿಕಾ ಸಂಯುಕ್ತ ಸಂಸ್ಥಾನದ ಆಟ್ಲಾಂಟ ನಗರದಲ್ಲಿ ಜನಿಸಿದ ಡಾ. ರೆವೆರೆಂಡ್ ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್, ಅಮೇರಿಕಾದ ವರ್ಣಭೇಧನೀತಿಯ ವಿರುಧ್ಧ ಹೋರಾಡಿದ ಪ್ರಮುಖ ಕಪ್ಪು ನಾಯಕರಲ್ಲೊಬ್ಬರು.ಇವರನ್ನು ಗೌರವಿಸಿದ ಪ್ರಶಸ್ತಿಗಳಲ್ಲಿ "ನೊಬೆಲ್ ಶಾಂತಿ ಪ್ರಶಸ್ತಿ" ಮತ್ತು "ಅಮೇರಿಕದ ಅಧ್ಯಕ್ಷರ ಸ್ವಾತಂತ್ರ್ಯ ಪದಕ"ಗಳು ಪ್ರಮುಖವಾದವು. ಮಹಾತ್ಮ ಗಾಂಧಿಯವರಿಂದ ಪ್ರಭಾವಿತರಾಗಿದ್ದ ಇವರ ಅಹಿಂಸಾತ್ಮಕ ಚಳುವಳಿ ಮತ್ತು ಸರಳ ನಡವಳಿಕೆಗಳು, ಜಗತ್ತಿನಾದ್ಯಂತ ಜನಪ್ರಿಯಗೊಳಿಸಿದವು. ಎಪ್ರಿಲ್ 04, 1968ರಂದು ಇವರು ಹಂತಕನ ಗುಂಡಿಗೆ ಬಲಿಯಾಗಿ ಹುತಾತ್ಮರಾದರು.



ಶ್ರೀ ರಾಮಕೃಷ್ಣ ಪರಮಹಂಸ : (ಫೆಬ್ರವರಿ 18, 1836 – ಆಗಸ್ಟ್ 16, 1886)
ಭಾರತದ ಪ್ರಸಿದ್ಧ ಆಧ್ಯಾತ್ಮಿಕ ಚಿಂತಕರಾಗಿದ್ದಾರೆ. ಕಾಳಿಯ ಆರಾಧಕರಾಗಿದ್ದ ಪರಮಹಂಸರು ಅದ್ವೈತ ವೇದಾಂತ ಸಿದ್ಧಾಂತವನ್ನು ಬೋಧಿಸಿದರಲ್ಲದೆ, ಎಲ್ಲ ಧರ್ಮಗಳೂ ಒಂದೇ ಗುರಿಯತ್ತ ನಮ್ಮನ್ನು ಒಯ್ಯುತ್ತವೆ ಎಂದು ನಂಬಿದ್ದರು. 19ನೆಯ ಶತಮಾನದ ಹಿಂದೂ ಧರ್ಮದ ಪುನರುಜ್ಜೀವನಕ್ಕೆ ದಾರಿ ಮಾಡಿಕೊಟ್ಟ ವ್ಯಕ್ತಿಗಳಲ್ಲಿ ಪರಮಹಂಸರೂ ಒಬ್ಬರು. ಇವರ ಮೊದಲ ಹೆಸರು "ಗಧಾದರ". ಪರಮಹಂಸರ ಜೀವನ ಮತ್ತು ಬೋಧನೆಗಳು ಭಾರತೀಯ ಸಂಸ್ಕೃತಿ ಮತ್ತು ನಂಬಿಕೆಗಳ ಮೇಲೆ ಅಪಾರವಾದ ಪ್ರಭಾವವನ್ನು ಬೀರಿವೆ. ಇವರ ನೆಚ್ಚಿನ ಶಿಷ್ಯರಾದ ಸ್ವಾಮಿ ವಿವೇಕಾನಂದರು 'ರಾಮಕೃಷ್ಣ ಮಿಷನ್' ಅನ್ನು ರಾಮಕೃಷ್ಣರ ಗೌರವಾರ್ಥವಾಗಿಯೇ ಸ್ಥಾಪಿಸಿದರು.



ಗೋಪಾಲ ಕೃಷ್ಣ ಗೋಖಲೆ : (ಮೇ 9, 1866 – ಫೆಬ್ರುವರಿ 19, 1915)
ಭಾರತೀಯರಿಗೆ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವುದು ಮಾತ್ರವಲ್ಲದೆ, ಸಮಾಜ ಸುಧಾರಣೆಯೂ ಅವಶ್ಯಕತೆಯು ಮುಖ್ಯ ಎಂದು ಮನಗಂಡಿದ್ದರು. ಗೋಖಲೆ ಅವರು ಈ ಉದ್ದೇಶಕ್ಕಾಗಿ ಸೂಚಿಸಿದ ಪ್ರಮುಖ ಕಾರ್ಯವಿಧಾನಗಳೆಂದರೆ, ಅಹಿಂಸೆ ಮತ್ತು ಅಸ್ತಿತ್ವದಲ್ಲಿರುವ ಸರ್ಕಾರಿ ಸಂಸ್ಥೆಗಳ ಆಡಳಿತದಲ್ಲಿ ಮೌಲ್ಯಯುತ ಕಾರ್ಯನಿರ್ವಹಣಾ ವಿಧಾನದ ಅನುಸರಣೆ. ಗೋಪಾಲಕೃಷ್ಣ ಗೋಖಲೆ ಅವರನ್ನು ಆದರ್ಶವೆಂದು ಪರಿಗಣಿಸಿದ್ದ ಡಿ.ವಿ.ಜಿ ಅವರು ಹೇಳುತ್ತಾರೆ "ಜನರಿಗೆ ಬದುಕು ಸಹ್ಯವೂ ಪ್ರಿಯವೂ ಅರ್ಥಪೂರಿತವೂ ಆಗಬೇಕೆಂಬ ಮಹದೋದ್ದೇಶಕ್ಕೆ ಸಾರ್ವಜನಿಕ ಕ್ಷೇತ್ರದೊಳಗಿದ್ದು ಅಪರಿಮಿತವಾಗಿ ಶ್ರಮಿಸಿದವರು ಗೋಪಾಲಕೃಷ್ಣ ಗೋಖಲೆ ಅವರು. ಅವರೊಬ್ಬ ಪೂರ್ಣಕಾರಿಗಳು" ಎಂದರು ಮಹಾತ್ಮ ಗಾಂಧೀಜಿ ಅವರು ಗೋಖಲೆ ಅವರನ್ನು ತಮ್ಮ ಗುರುಗಳೆಂದು ಪರಿಗಣಿಸಿದ್ದರು.

ಇವರಿಗೆ, ______________________________

____

____

If undelivered please return to:

Hon. Secretary, Karnataka Gandhi Smaraka Nidhi, Gandhi Bhavana, Kumara Park Post Bengaluru - 560001,Ph: 080 22261967, Email : gandhibhavanabengaluru@gmail.com

Printed at Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049